ಸಂಪುಟ: 11 ಸಂಚಿಕೆ: 206 ಪುಟಗಳು: 4+2 ಬೆಲೆ: ₹ 3.00 ಭಾನುವಾರ, ಸೆಪ್ಟೆಂಬರ್ 20, 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 206 Pages : 4+2 Rate : 3.00 Sunday, September 20, 2026 Gadag RNI No : KARKAN/2015/63412 E-mail: vijayasakshidaily@gmail.com Post Regn.No: GDG/72/2020-22

## ಕೆರೆ ದಡದ ರಸ್ತೆಗೆ ತಡೆಗೋಡೆ ನಿರ್ಮಿಸಿ



**ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಇಲ್ಲಿನ ದಂಡಿನ ದುರ್ಗಾದೇವಿ ಕೆರೆಗೆ ಹೊಂದಿಕೊಂಡಿರುವ ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಸಮರ್ಪಕ ಸುರಕ್ಷತಾ ವ್ಯವಸ್ಥೆ ಕಲ್ಪಿಸಬೇಕು ಎಂದು ರಾಷ್ಟ್ರೀಯ ಅಹಿಂದ ಸಂಘಟನೆ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದೆ.

ಕೆರೆಯ ಪಕ್ಕದ ರಸ್ತೆಗೆ ತಡೆಗೋಡೆ, ಸುರಕ್ಷತಾ ಕಂಬಗಳು ಹಾಗೂ ಎಚ್ಚರಿಕೆ ಫಲಕಗಳಿಲ್ಲ. ರಾತ್ರಿ ವೇಳೆ ಬೆಳಕಿನ ವ್ಯವಸ್ಥೆಯೂ ಇಲ್ಲದ ಕಾರಣ ವಾಹನ ಸವಾರರಿಗೆ ರಸ್ತೆ ಅಂಚು ಹಾಗೂ ಕೆರೆ ಕಾಣದೆ ಅಪಘಾತ ಸಂಭವಿಸುವ ಆತಂಕವಿದೆ. ಈಗಾಗಲೇ ಅಪಘಾತಗಳು ಸಂಭವಿಸಿ ಜೀವಹಾನಿಯಾಗಿರುವುದರಿಂದ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ರಸ್ತೆಯುದ್ದಕ್ಕೂ ತಡೆಗೋಡೆ, ಸುರಕ್ಷತಾ ಕಂಬ, ಬೀದಿ ದೀಪ ಹಾಗೂ ರಿಫ್ಲೆಕ್ಟರ್ ಅಳವಡಿಸಿ, ಅಪಾಯಕಾರಿ ಸ್ಥಳಗಳಲ್ಲಿ ಎಚ್ಚರಿಕೆ ಫಲಕ ಹಾಕಬೇಕು. ಒಂದು ವಾರದೊಳಗೆ ಕಾಮಗಾರಿ ಕೈಗೊಳ್ಳದಿದ್ದರೆ ಗ್ರಾಮಸ್ಥರೊಂದಿಗೆ ಗ್ರಾಮ ಪಂಚಾಯಿತಿ ಎದುರು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ರಾಷ್ಟ್ರೀಯ ಅಹಿಂದ ಸಂಘಟನೆ ಅಧ್ಯಕ್ಷೆ ಶ್ರೇಯಾ ಕಟಿಗ್ಗಾರ, ಸಾಮಾಜಿಕ ಜಾಲತಾಣದ ರಾಜ್ಯಾಧ್ಯಕ್ಷ ಸರ್ಫರಾಜ ನಮಾಜಿ, ಶಮೀರ ಯರಗುಡಿ, ಶಾಹಿಲ್ ತಹಶೀಲ್ದಾರ್, ಮೈನುದ್ದಿನ್ ಹಂದ್ರಾಳ, ರಿಯಾಜ ಮಸೂತಿ, ಫರೀಜ್ ಅಹ್ಮದ್ ಹಮಸಾಗರ, ಶರಣು ಕಲ್ಲೂರು ಉಪಸ್ಥಿತರಿದ್ದರು.

## ನಾಳೆ ಪುಟ್ಟರಾಜರ ಪುಣ್ಯಸ್ಮರಣೆ; ಮೂವರಿಗೆ ಪ್ರಶಸ್ತಿ

**ವಿಜಯಸಾಕ್ಷಿ ಸುದ್ದಿ, ಗದಗ**



ಗಾನಯೋಗಿ ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ವತಿಯಿಂದ ಪದ್ಮಭೂಷಣ ಡಾ. ಪಂ. ಪುಟ್ಟರಾಜ ಕವಿ ಶಿವಯೋಗಿಗಳ 16ನೇ ಪುಣ್ಯಸ್ಮರಣೋತ್ಸವ, ಶಿವಯೋಗಿ ಶ್ರೀ ಪುಟ್ಟರಾಜ ಪ್ರಶಸ್ತಿ ಪ್ರದಾನ ಹಾಗೂ ಸ್ವರನಮನ ಕಾರ್ಯಕ್ರಮ ಸೆ.21ರಂದು ನಗರದ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಡೆಯಲಿದೆ.

ಬೆಳಿಗ್ಗೆ 8ಕ್ಕೆ ವಿವಿಧ ಕಲಾತಂಡ ಹಾಗೂ ಕುಂಭ-ಕಳಸಗಳೊಂದಿಗೆ ಪುಟ್ಟರಾಜ ಗುರುವರ್ಯರ ಭಾವಚಿತ್ರದ ಮೆರವಣಿಗೆ ನಡೆಯಲಿದ್ದು, 10.30ಕ್ಕೆ ಮುಖ್ಯ ಸಮಾರಂಭ ಜರುಗಲಿದೆ. ತೋಂಟದಾರ್ಯ ಶ್ರೀಮಠದ ಜ.ಡಾ. ತೋಂಟದ ಸಿದ್ದರಾಮ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಪುಣ್ಯಾಶ್ರಮದ ಪೀಠಾಧಿಪತಿ ಡಾ. ಕಲ್ಲಯ್ಯಜ್ಜನವರು ಸಮ್ಮುಖ ವಹಿಸುವರು.

ಸಂಗೀತ ಕ್ಷೇತ್ರದ ಪಂ. ದೇವೇಂದ್ರಕುಮಾರ ಪತ್ತಾರ, ವಾದ್ಯ ಕ್ಷೇತ್ರದ ಪಂ. ಶರಣಕುಮಾರ ಗುತ್ತರಗಿ ಹಾಗೂ ರಂಗಭೂಮಿ ಕ್ಷೇತ್ರದ ರಾಚಯ್ಯ ಹಿರೇಮಠ ಅವರಿಗೆ ಶಿವಯೋಗಿ ಶ್ರೀ ಪುಟ್ಟರಾಜ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಮಧ್ಯಾಹ್ನ 1ಕ್ಕೆ ಮಹಾದಾಸೋಹ ನಡೆಯಲಿದ್ದು, ಸಂಜೆ ಬಳಿಕ ಪುಣ್ಯಾಶ್ರಮದ ಶಿಷ್ಯ-ಪ್ರಶಿಷ್ಯರಿಂದ ಅಹೋರಾತ್ರಿ ಸ್ವರನಮನ ಜರುಗಲಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಬಳ್ಳಾರಿ, ನಗರಸಭೆ ಸದಸ್ಯ ಅನಿಲ ಅಬ್ಬಿಗೇರಿ ಸೇರಿದಂತೆ ಗಣ್ಯರು ಭಾಗವಹಿಸುವರು.

## ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ ವೈಶಾಲಿ ಎಂ.ಎಲ್.

**ವಿಜಯಸಾಕ್ಷಿ ಸುದ್ದಿ, ಗದಗ**



ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀಮತಿ ವೈಶಾಲಿ ಎಂ.ಎಲ್., ಭಾ.ಆ.ಸೇ. ಅವರು ಸೆ.18ರಂದು ಅಧಿಕಾರ ವಹಿಸಿಕೊಂಡರು.

2013ನೇ ಕರ್ನಾಟಕ ಬ್ಯಾಚ್‌ನ ಭಾರತೀಯ ಆಡಳಿತ ಸೇವೆಯ ಅಧಿಕಾರಿಯಾಗಿರುವ ವೈಶಾಲಿ ಎಂ.ಎಲ್. ಅವರು ಪ್ರಸ್ತುತ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಅಧಿಕಾರ ಸ್ವೀಕರಿಸಿದ ಬಳಿಕ ಸೆ.19ರಂದು ಸಂಸ್ಥೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಸಾರಿಗೆ ಸಂಸ್ಥೆಯ ಕಾರ್ಯಾಚರಣೆ, ಸಾರ್ವಜನಿಕ ಸಾರಿಗೆ ಸೇವೆಗಳ ಸುಧಾರಣೆ ಹಾಗೂ ಪ್ರಯಾಣಿಕರಿಗೆ ಉತ್ತಮ ಗುಣಮಟ್ಟದ ಸೇವೆ ಒದಗಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

### ಒಂಭತ್ತನೇ ದಿನಕ್ಕೆ ವಿಸರ್ಜನೆ; ಹರ್ತಿಯ 9 ಮಂಡಳಿಗಳಿಗೂ ಸಮ್ಮತಿ

# 22ರಂದು 114 ಗಣೇಶ ಮೂರ್ತಿಗಳ ವಿಸರ್ಜನೆ

**ವಿಜಯಸಾಕ್ಷಿ ಸುದ್ದಿ, ಗದಗ**



ಜಿಲ್ಲೆಯ ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳ ಗಣೇಶ ಮೂರ್ತಿಗಳನ್ನು ಒಂಭತ್ತನೇ ದಿನವಾದ ಸೆ.22ರಂದು ವಿಸರ್ಜಿಸಲು ಜಿಲ್ಲಾ ಸಾರ್ವಜನಿಕ ಗಣೇಶೋತ್ಸವ ಮಹಾಮಂಡಳಿ ನಿರ್ಧರಿಸಿದೆ. ಗದಗ-ಬೆಟಗೇರಿ ಅವಳಿ ನಗರದಲ್ಲಿರುವ ಸುಮಾರು 114 ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳು ಈ ನಿರ್ಧಾರಕ್ಕೆ ಸಮ್ಮತಿ ಸೂಚಿಸಿವೆ.

ಜಿಲ್ಲಾ ಸಾರ್ವಜನಿಕ ಗಣೇಶೋತ್ಸವ ಮಹಾಮಂಡಳಿಯ ಸಭೆಯಲ್ಲಿ ಈ ಕುರಿತು ಸರ್ವಾನುಮತದ ನಿರ್ಣಯ ಕೈಗೊಳ್ಳಲಾಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಮಹಾಮಂಡಳಿ ಅಧ್ಯಕ್ಷ ರಾಜೂ ಮಲ್ಲಾಡದ ಮಾತನಾಡಿ, ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳು ಒಂದೇ ದಿನ ವಿಸರ್ಜನೆ ನಡೆಸುವುದರಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಹಾಗೂ ಪೊಲೀಸ್ ಇಲಾಖೆಗೆ ಕಾರ್ಯನಿರ್ವಹಿಸಲು ಅನುಕೂಲವಾಗಲಿದೆ ಎಂದರು.

ಲೋಕಮಾನ್ಯ ಬಾಲಗಂಗಾಧರ ಟಿಳಕರು ಆರಂಭಿಸಿದ ಸಾರ್ವಜನಿಕ ಗಣೇಶೋತ್ಸವದ ಪರಂಪರೆ ಜಿಲ್ಲೆಯಲ್ಲಿ ಐದು ದಶಕಗಳಿಗೂ ಹೆಚ್ಚು ಕಾಲದಿಂದ ಮುಂದುವರಿದಿದೆ. ದಿ. ದಯಾನಂದ ಪಾಲನಕರ, ದಿ. ಬಸಣ್ಣ ಮಲ್ಲಾಡದ ಹಾಗೂ ದಿ. ವಾಸಣ್ಣ ಹೆಬಸೂರ ಅವರ ನೇತೃತ್ವದಲ್ಲಿ ಜಿಲ್ಲೆಯಲ್ಲಿ ಗಣೇಶೋತ್ಸವಕ್ಕೆ ಚಾಲನೆ ದೊರೆತಿದ್ದು, ಅಂದಿನಿಂದ ಇಂದಿನವರೆಗೂ ಪರಂಪರೆ ಮುಂದುವರಿದಿದೆ ಎಂದು ತಿಳಿಸಿದರು.

ಹಿಂದೂ ಸಂಘಟನೆಗಳ ಮುಖಂಡ ರಾಜೂ ಖಾನಪ್ಪನವರ ಮಾತನಾಡಿ, ಸಮಾಜದಲ್ಲಿ ಒಗ್ಗಟ್ಟು ಮತ್ತು ಸಂಘಟನಾ ಶಕ್ತಿ ಹೆಚ್ಚಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕ ಗಣೇಶೋತ್ಸವವನ್ನು ಸಂಘಟಿತವಾಗಿ ಆಚ-ರಿಸುವುದು ಮಹತ್ವದ್ದಾಗಿದೆ ಎಂದರು.

**ಹರ್ತಿಯಲ್ಲಿ 9 ಮಂಡಳಿಗಳ ಒಗ್ಗಟ್ಟು**

ಮಹಾಮಂಡಳಿಯ ಸಲಹೆಯನ್ನು ಈ ವರ್ಷದಿಂದಲೇ ಪಾಲಿಸುವುದಾಗಿ ಘೋಷಿಸಿದ ಗದಗ ತಾಲೂಕಿನ ಹರ್ತಿ ಗ್ರಾಮದ ಒಂಭತ್ತು ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳ ಪದಾಧಿಕಾರಿಗಳನ್ನು ಜಿಲ್ಲಾ ಸಾರ್ವಜನಿಕ ಗಣೇಶೋತ್ಸವ ಮಹಾಮಂಡಳಿ ಅಧ್ಯಕ್ಷ ರಾಜೂ ಮಲ್ಲಾಡದ, ಕಿಶನ್ ಮೆರವಾಡೆ ಹಾಗೂ ರಾಜೂ ಖಾನಪ್ಪನವರ ನೇತೃತ್ವದಲ್ಲಿ ಸನ್ಮಾನಿಸಲಾಯಿತು.

ಗ್ರಾಮದ ಮುಖಂಡ ಸೋಮರಡ್ಡಿ ನಡವೂರ ಮಾತನಾಡಿ, ಗಣೇಶೋತ್ಸವದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುತ್ತಿರುವುದು ಸಂತಸ ತಂದಿದೆ. ಇದೇ ಒಗ್ಗಟ್ಟು ಮುಂದಿನ ದಿನಗಳಲ್ಲಿಯೂ ಮುಂದುವರಿಯಲಿ ಎಂದು ಆಶಿಸಿದರು. ಗ್ರಾಮದ ಎಲ್ಲ ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳು ಸೆ.22ರಂದು ಗಣೇಶ ಮೂರ್ತಿಗಳ ವಿಸರ್ಜನೆ ನಡೆಸಲಿವೆ ಎಂದು ಘೋಷಿಸಿದರು.

> ಹಿಂದೂ ಸಮಾಜದಲ್ಲಿ ಸಂಘಟನೆಯ ಕೊರತೆಯಿಂದ ಅನೇಕ ಸಮಸ್ಯೆಗಳು ಎದುರಾಗುತ್ತಿವೆ. ದೌರ್ಜನ್ಯಗಳು ನಡೆದಾಗಲೂ ಸಂಘಟಿತ ಧ್ವನಿ ಇಲ್ಲದೆ ಕೆಲವರು ಮೌನವಾಗಿ ಸಹಿಸಿಕೊಳ್ಳುವ ಪರಿಸ್ಥಿತಿ ಇದೆ. ಈ ಹಿನ್ನೆಲೆಯಲ್ಲಿ ಸಮಾಜದಲ್ಲಿ ಜಾಗೃತಿ ಮೂಡಿಸಿ, ಪರಸ್ಪರ ಸಹಕಾರ ಮತ್ತು ಸಂಘಟನಾ ಮನೋಭಾವ ಬೆಳೆಸುವುದು ಇಂದಿನ ಅಗತ್ಯವಾಗಿದೆ.
>
> - ರಾಜೂ ಖಾನಪ್ಪನವರ, ಹಿಂದೂ ಸಂಘಟನೆಗಳ ಮುಖಂಡ

ಈ ಸಂದರ್ಭದಲ್ಲಿ ರವಿಗೌಡ ಪಾಟೀಲ, ಜೀನಪ್ಪ ಪುಟ್ಟಣ್ಣವರ, ಗೂಳಪ್ಪ ಗೂಡೂರ, ಸೋಮರಡ್ಡಿ ರಡ್ಡೇರ, ಸುಭಾಸ ಅನಸೂರ, ಸಿದ್ದಪ್ಪ ಜೋಡಿ, ಚನ್ನಪ್ಪ ನಾವಳ್ಳಿ, ನಿಂಗಪ್ಪ ಚಲುವಾದಿ, ಯಲ್ಲಪ್ಪ ತಿಪ್ಪಣ್ಣವರ, ಬಸವರಾಜ ಯಳವತ್ತಿ, ರಾಜಣ್ಣ ಹಿರೇಮಠ, ಪ್ರಕಾಶ ಲದ್ದಿ, ಮಹಾಂತೇಶಗೌಡ ಪಾಟೀಲ, ಪ್ರಭು ಹುಡೇದ, ಜಡಿಯಪ್ಪ ಲದ್ದಿ, ಭರತ್ ಲದ್ದಿ, ಮಹೇಶ ಕಮ್ಮಾರ, ಬಸಪ್ಪ ನವಲಿ, ದೀಪು ಕಮ್ಮಾರ, ಶರಣಪ್ಪ ಹೊನ್ನಪ್ಪನವರ, ಹುಚ್ಚಪ್ಪ ಆರೇರ, ರವಿ ನಾವಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಬನ್ನಿಕೊಪ್ಪದಲ್ಲಿ SVEEP ಜಾಥಾ | ಮಾನವ ಸರಪಳಿ ಮೂಲಕ ಜಾಗೃತಿ

# 18 ತುಂಬಿದ್ರೆ ಮತದಾರರ ಪಟ್ಟಿಗೆ ಬನ್ನಿ

**ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**




18 ವರ್ಷ ಪೂರ್ಣಗೊಂಡ ಯುವಜನರು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡು ಪ್ರಜಾಪ್ರಭುತ್ವದ ಚುನಾವಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಜಾಗೃತಿ ಮೂಡಿಸಲು ಶಿರಹಟ್ಟಿ ತಾಲೂಕಿನ ಬನ್ನಿಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶನಿವಾರ ಋಗಿಇಇಕ ಜಾಗೃತಿ ಜಾಥಾ ನಡೆಯಿತು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ತಾಲೂಕು ಋಗಿಇಇಕ ಸಮಿತಿ ಅಧ್ಯಕ್ಷ ಆರ್.ವಿ. ದೊಡ್ಡಮನಿ ಮತ್ತು ಇಖಔ ಹಾಗೂ ತಾಲೂಕು ದಂಡಾಧಿಕಾರಿ ಕೆ. ರಾಘವೇಂದ್ರ ರಾವ್ ಜಾಥಾಗೆ ಚಾಲನೆ ನೀಡಿದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿದ ಜಾಥಾದಲ್ಲಿ ವಿದ್ಯಾರ್ಥಿಗಳು, ಅಧಿಕಾ-ರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಪಾಲ್ಗೊಂಡು ಮತದಾರರ ನೋಂದಣಿ ಮತ್ತು ಮತದಾನದ ಮಹತ್ವದ ಕುರಿತು ಘೋಷಣೆಗಳ ಮೂಲಕ ಅರಿವು ಮೂಡಿಸಿದರು.

"ನಿಮ್ಮ ಮತ-ನಿಮ್ಮ ಹಕ್ಕು", "ಪ್ರಜಾಪ್ರಭುತ್ವ ಬಲಪಡಿಸಲು ಮತದಾರರಾಗಿ ನೋಂದಾಯಿಸಿಕೊಳ್ಳಿ" ಸೇರಿದಂತೆ ವಿವಿಧ ಸಂದೇಶಗಳು ಜಾಥಾದಲ್ಲಿ ಮೊಳಗಿದವು. ಬಳಿಕ ವಿದ್ಯಾರ್ಥಿಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಮಾನವ ಸರಪಳಿ ನಿರ್ಮಿಸಿ ಯುವ ಮತದಾರರ ನೋಂದಣಿಗೆ ಕರೆ ನೀಡಿದರು.

18 ವರ್ಷ ಪೂರ್ಣಗೊಂಡ ಪ್ರತಿಯೊಬ್ಬ ಅರ್ಹ ಯುವಜನರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಪರಿಶೀಲಿಸಿಕೊಳ್ಳಬೇಕು. ಹೆಸರು ಇಲ್ಲದಿದ್ದರೆ ನಿಯಮಾನುಸಾರ ನೋಂದಣಿ ಮಾಡಿಸಿಕೊಳ್ಳುವಂತೆ ಜಾಗೃತಿ ಮೂಡಿಸಲಾಯಿತು. ಬನ್ನಿಕೊಪ್ಪದ ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿ ಕಾಲೇಜುಗಳ ವಿದ್ಯಾರ್ಥಿಗಳು, ಶಿಕ್ಷಕರು, ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸಿದರು.

> 18 ವರ್ಷ ಪೂರ್ಣಗೊಂಡ ಅರ್ಹ ಯುವಜನರು ಯಾವುದೇ ಕಾರಣಕ್ಕೂ ಮತದಾರರ ಪಟ್ಟಿಯಿಂದ ಹೊರಗುಳಿಯಬಾರದು. ತಮ್ಮ ಹೆಸರು ಪರಿಶೀಲಿಸಿಕೊಂಡು, ನೋಂದಣಿಯಾಗದಿದ್ದರೆ ಅಗತ್ಯ ಕ್ರಮದ ಮೂಲಕ ನೋಂದಾಯಿಸಿಕೊಳ್ಳಬೇಕು. ಯುವಜನರು ತಮ್ಮ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಹೊಂದುವುದು ಅಗತ್ಯ.
>
> - ಆರ್.ವಿ. ದೊಡ್ಡಮನಿ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ತಾಲೂಕು SVEEP ಸಮಿತಿ ಅಧ್ಯಕ್ಷರು

### ಸರ್ಕಾರದ ಆದೇಶ ಪಾಲನೆಗೆ ರೈತ ಸಂಘ ಆಗ್ರಹ; ಜೆಸ್ಕಾಂಗೆ ಮನವಿ

# ಅನ್ನದಾತರಿಗೆ 7 ಗಂಟೆ ಕರೆಂಟ್ ಕೊಡಿ

**ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**



ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸರ್ಕಾರದ ಆದೇಶದಂತೆ ಹಗಲು ವೇಳೆಯಲ್ಲಿ ನಿರಂತರ 7 ಗಂಟೆ ವಿದ್ಯುತ್ ಪೂರೈಕೆ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕದ ವತಿಯಿಂದ ಜೆಸ್ಕಾಂ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ರೈತ ಸಂಘದ ಜಿಲ್ಲಾ ಅಧ್ಯಕ್ಷ ಆಂಜನೇಯಲು ಅವರ ನೇತೃತ್ವದಲ್ಲಿ ಸಲ್ಲಿಸಿದ ಮನವಿಯಲ್ಲಿ, ಸದ್ಯ ಪಂಪ್‌ಸೆಟ್‌ಗಳಿಗೆ ಎರಡು ಹಂತಗಳಲ್ಲಿ ಒಟ್ಟು 6 ಗಂಟೆ ವಿದ್ಯುತ್ ನೀಡಲಾಗುತ್ತಿದ್ದು, ಇದರಿಂದ ಕೃಷಿ ಚಟುವಟಿ-ಕೆಗಳಿಗೆ ತೊಂದರೆಯಾಗುತ್ತಿದೆ. ಬೆಳೆಗಳಿಗೆ ಸಮರ್ಪಕವಾಗಿ ನೀರುಣಿಸಲು ರೈತರು ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ತಿಳಿಸಲಾಯಿತು.

ಹಗಲು ವಿದ್ಯುತ್ ಪೂರೈಕೆಯಿಂದ ರೈತ-ರಿಗೆ ಜಮೀನಿನಲ್ಲಿ ಪಂಪ್‌ಸೆಟ್ ನಿರ್ವಹಣೆ ಸುಲಭವಾಗಲಿದೆ. ರಾತ್ರಿ ವಿದ್ಯುತ್ ನೀಡುವುದ-ರಿಂದ ರೈತರು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹೀಗಾಗಿ ಸರ್ಕಾರದ ಆದೇಶದಂತೆ ಹಗಲು ವೇಳೆಯಲ್ಲಿ ನಿರಂತರ 7 ಗಂಟೆ ವಿದ್ಯುತ್ ಪೂರೈಸಬೇಕು ಎಂದು ಆಗ್ರಹಿಸಿದರು.

ಸರ್ಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ರೈತರೊಂದಿಗೆ ಚರ್ಚಿಸಿ ಮುಂದಿನ ಹೋರಾಟದ ರೂಪುರೇಷೆ ರೂಪಿಸುವುದಾಗಿ ಸಂಘದ ಮುಖಂಡರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾ ಗೌರವಾಧ್ಯಕ್ಷ ಬಾಣದ ಶಿವಪ್ಪ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಬಿ. ಗೋಣಿಬಸಪ್ಪ, ತಾಲೂಕು ಅಧ್ಯಕ್ಷ ಪಿ. ಬಸವನಗೌಡ, ಕೆ. ನಿಂಗಪ್ಪ, ಕಲೀಲ್ ಸಾಬ್, ಎನ್.ಎಂ. ಗೌಸ್, ಎಂ. ಚಂದ್ ಸಾಬ್, ಜಿ. ನಿಂಗಪ್ಪ, ಎ. ಬಸವರಾಜ್, ಹೆಚ್. ನಿಂಗಪ್ಪ, ಆರ್. ಸಕ್ರಿಗೌಡ, ಎ. ಕೊಟ್ರಪ್ಪ ಸೇರಿದಂತೆ ರೈತ ಸಂಘದ ಮುಖಂಡರು ಉಪಸ್ಥಿತರಿದ್ದರು.

> ಪ್ರಸ್ತುತ ವಿದ್ಯುತ್ ಉತ್ಪಾದನೆ ಕಡಿಮೆಯಾಗಿರುವ ಕಾರಣ 6 ಗಂಟೆ ವಿದ್ಯುತ್ ಪೂರೈಸಲಾಗುತ್ತಿದೆ. ಈ ವಾರವೂ 7 ಗಂಟೆ ವಿದ್ಯುತ್ ನೀಡಿದ್ದೇವೆ. ವಿದ್ಯುತ್ ಉತ್ಪಾದನೆ ಹೆಚ್ಚಾದ ಬಳಿಕ ನಿರಂತರವಾಗಿ 7 ಗಂಟೆ ಪೂರೈಕೆ ಮಾಡಲಾಗುವುದು.
>
> - ಆರ್. ಹೇಮರೆಡ್ಡಿ, ಎಇಇ, ಜೆಸ್ಕಾಂ, ಹಗರಿಬೊಮ್ಮನಹಳ್ಳಿ

# ಕ್ರೈಸ್ತ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಿ




**ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯದ ಶೈಕ್ಷಣಿಕ, ಸಾಮಾಜಿಕ ಹಾಗೂ ಆರೋಗ್ಯ ಕ್ಷೇತ್ರಗಳಿಗೆ ಕ್ರೈಸ್ತ ಸಮುದಾಯ ನೀಡುತ್ತಿರುವ ಕೊಡುಗೆಯನ್ನು ಪರಿಗಣಿಸಿ, ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸಬೇಕು ಎಂದು ಜಿಲ್ಲಾ ಬಿಷಪ್ ಫ್ರಾನ್ಸಿಸ್ ಕ್ಷೇವಿಯರ್ ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ರೈಸ್ತ ಸಮುದಾಯಕ್ಕೆ ಹಿಂದುಳಿದ ವರ್ಗಗಳ ಅಡಿಯಲ್ಲಿ ಶೇ.1ರಷ್ಟು ಪ್ರತ್ಯೇಕ ಮೀಸಲಾತಿ ಕಲ್ಪಿಸಬೇಕು. ಸಮುದಾಯದ ಧ್ವನಿಯನ್ನು ವಿಧಾನಸಭೆಯಲ್ಲಿ ಪ್ರತಿನಿಧಿಸಲು ಕ್ರೈಸ್ತ ಸಮುದಾಯದ ನಾಯಕರೊಬ್ಬರನ್ನು ವಿಧಾನ ಪರಿಷತ್ತಿಗೆ ಆಯ್ಕೆ ಮಾಡಬೇಕು ಎಂದು ಒತ್ತಾಯಿಸಿದರು.

ರಾಜ್ಯದ ವಿವಿಧ ನಿಗಮ-ಮಂಡಳಿಗಳ ಅಧ್ಯಕ್ಷ ಹಾಗೂ ನಿರ್ದೇಶಕರ ಹುದ್ದೆಗಳಲ್ಲಿ ಸಮುದಾಯದ ನಾಯಕ-ರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡಬೇಕು. ಸಮುದಾಯದಲ್ಲಿ ಆತಂಕಕ್ಕೆ ಕಾರಣವಾಗಿರುವ ಕರ್ನಾಟಕದ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ, 2022 ಅನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು. ಇತ್ತೀಚೆಗೆ ರಾಜ್ಯದ ಕ್ರೈಸ್ತ ಮುಖಂಡರು ಇದೇ ರೀತಿಯ ಬೇಡಿಕೆಗಳನ್ನು ರಾಜ್ಯ ಮಟ್ಟದಲ್ಲಿ ಮುಂದಿಟ್ಟಿರುವುದು ವರದಿಯಾಗಿದೆ.

ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಪ್ರತಿವರ್ಷ ಸೆ.8ರಂದು ನಡೆಯುವ 'ಆರೋಗ್ಯ ಮಾತೆ' ಜಯಂತ್ಯುತ್ಸವ ಹಾಗೂ ವಾರ್ಷಿಕ ಮಹೋತ್ಸವಕ್ಕೆ ಸರ್ಕಾರಿ ರಜೆ ಘೋಷಿಸಬೇಕು ಎಂದರು.

ಕ್ರೈಸ್ತ ಸಮುದಾಯದ ಏಳಿಗೆ ಹಾಗೂ ಹಕ್ಕುಗಳ ರಕ್ಷಣೆಗೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ರಾಜ್ಯಾದ್ಯಂತ ಶಾಂತಿಯುತ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.


ಸುದ್ದಿಗೋಷ್ಠಿಯಲ್ಲಿ ಜೋಸೆಫ್ ಉದೋಜಿ, ರೇ. ಎಬಿನೇಜರ್, ನೋವೆಲ್ ಮುಟ್ಟಿಗೇರಿ ಹಾಗೂ ಅಂತೋನಿ ಕರೇಗಾರ ಸೇರಿದಂತೆ ಸಮುದಾಯದ ಪ್ರಮುಖರು ಉಪಸ್ಥಿತರಿದ್ದರು.



## ಸಂಗೀತ-ವಾದ್ಯ-ರಂಗಭೂಮಿಯ ಮೂವರು ಸಾಧಕರಿಗೆ ಗೌರವ

# ಗವಾಯಿಗಳ ಪರಂಪರೆಗೆ ಸಾಧಕರ ನಮನ





**ವಿಜಯಸಾಕ್ಷಿ ಸುದ್ದಿ, ಗದಗ**

ಸಂಗೀತ, ಸಾಹಿತ್ಯ ಹಾಗೂ ರಂಗಭೂಮಿ ಸೇ-ರಿದಂತೆ ವಿವಿಧ ಕಲಾ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದ ಪದ್ಮಭೂಷಣ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ 16ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ಗುರುಪರಂಪರೆಯನ್ನು ಮುಂದುವರಿಸಿಕೊಂಡು ತಮ್ಮ ಕ್ಷೇತ್ರದಲ್ಲಿ ಸುದೀರ್ಘ ಸಾಧನೆ ಮಾಡಿದ ಮೂವರು ಕಲಾವಿದರನ್ನು ಗೌರವಿಸಲಾಗುತ್ತಿದೆ.

**ಸ್ವರಸಾಧಕ ಪಂ. ದೇವೇಂದ್ರಕುಮಾರ ಪತ್ತಾರ**

ಕಲ್ಯಾಣ ಕರ್ನಾಟಕದ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಮುಧೋಳದಲ್ಲಿ 1955ರ ಡಿ.14ರಂದು ಜನಿಸಿದ ಪಂ. ದೇವೇಂದ್ರಕುಮಾರ ಪತ್ತಾರ ಅವರು ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯತ್ವ ಪಡೆದು ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ 12 ವರ್ಷ ಗುರುಕುಲ ಪದ್ಧತಿಯಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಗ್ವಾಲಿಯರ್ ಘರಾಣೆಯಲ್ಲಿ ಅಧ್ಯಯನ ಮಾಡಿದ್ದಾರೆ.

ನಾಡಿನಾದ್ಯಂತ ಸಂಗೀತ ಕಚೇರಿಗಳನ್ನು ನಡೆಸಿರುವ ಅವರು ಶರಣ, ವಚನ ಹಾಗೂ ದಾಸ ಸಾಹಿತ್ಯವನ್ನು ಗಾಯನದ ಮೂಲಕ ಜನರಿಗೆ ತಲುಪಿಸಿದ್ದಾರೆ. ಸಂಡೂರಿನಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ ಆರಂಭಿಸಿ, ಮುದಗಲ್‌ನಲ್ಲಿ ಪಂ. ಪುಟ್ಟರಾಜ ಗವಾಯಿಗಳ ಹೆಸರಿನಲ್ಲಿ ಸಂಗೀತ ಶಾಲೆ ಸ್ಥಾಪಿಸಿ ಅನೇಕ ಸಂಗೀತ ಸಾಧಕರನ್ನು ರೂಪಿಸಿದ್ದಾರೆ. ಇವರ ಸುದೀರ್ಘ ಸಂಗೀತ ಸೇವೆ ಗುರುತಿಸಿ ಸನ್ಮಾನಿಸಲಾಗುತ್ತಿದೆ.

**ತಬಲಾ ತಾಳದ ಸಾಧಕ ಶರಣಕುಮಾರ ಗುತ್ತರಗಿ**

ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಗುತ್ತರಗಿಯಲ್ಲಿ 1968ರ ಜು.22ರಂದು ಜನಿಸಿದ ಪಂ. ಶರಣಕುಮಾರ ಗುತ್ತರಗಿ ಅವರು 10ನೇ ವಯಸ್ಸಿನಲ್ಲೇ ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮ ಸೇರಿ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾದರು.

ಗುರುಗಳ ಸಾನ್ನಿಧ್ಯದಲ್ಲಿ 15 ವರ್ಷ ತಬಲಾ ವಾದನ ಅಭ್ಯಾಸ ಮಾಡಿ ಪ್ರಾವೀಣ್ಯ ಪಡೆದ ಅವರು, ನಾಡಿನ ಹಲವು ಸಂಗೀತ ದಿಗ್ಗಜರಿಗೆ ತಬಲಾ ಸಾಥ್ ನೀಡಿದ್ದಾರೆ. ತಬಲಾ ಶಿಕ್ಷಕರಾಗಿ ವೃತ್ತಿ ಆರಂಭಿಸಿ, ಪ್ರಸ್ತುತ ಗದುಗಿನ ಪಿಪಿಜಿ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಸುದೀರ್ಘ ತಬಲಾ ಸೇವೆ ಹಾಗೂ ಸಾಧನೆಗೆ ಗೌರವ ಸಲ್ಲಿಸಲಾಗುತ್ತಿದೆ.

**ರಂಗಭೂಮಿಯ ಹಿರಿಯ ಕಲಾವಿದ ರಾಚಯ್ಯ ಹಿರೇಮಠ**

ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಹುರುಳಿಕೊಪ್ಪದ ರಾಚಯ್ಯ ಮಡಿವಾಳಯ್ಯ ಹಿರೇಮಠ ಅವರು ನಾಲ್ಕು ದಶಕಗಳಿಂದ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದಾರೆ.

ಗದುಗಿನ ಪಂಡಿತ ಪಂಚಾಕ್ಷರಿ ಗವಾಯಿಗಳವರ ನಾಟ್ಯ ಸಂಘದಲ್ಲಿ ಸೇವೆ ಸಲ್ಲಿಸಿರುವ ಅವರು, ವಿವಿಧ ನಾಟಕಗಳಲ್ಲಿ ಹಾಸ್ಯ ಸೇರಿದಂತೆ ಹಲವು ಪಾತ್ರಗಳನ್ನು ನಿರ್ವಹಿಸಿ ಅಭಿನಯದ ಮೂಲಕ ಗಮನ ಸೆಳೆದಿದ್ದಾರೆ. ನಟನೆಯ ಜತೆಗೆ ನಿರ್ದೇಶಕರಾಗಿಯೂ ಗುರುತಿಸಿಕೊಂಡಿರುವ ಅವರು, ರಂಗಭೂಮಿಯ ಸುದೀರ್ಘ ಸೇವೆಗಾಗಿ ಶ್ರೀ ಹಾನಗಲ್ ಕುಮಾರೇಶ್ವರ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳಿಗೆ ಪಾತ್ರರಾಗಿದ್ದಾರೆ.

ಪುಟ್ಟರಾಜ ಗವಾಯಿಗಳವರ ಗುರುಪರಂಪರೆಯ ಕಲಾ ಸೇವೆಯನ್ನು ಮುಂದುವರಿಸಿಕೊಂಡು ಬಂದಿರುವ ಈ ಮೂವರು ಸಾಧಕರನ್ನು 16ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ಗೌರವಿಸಲಾಗುತ್ತಿದೆ.

# ವಿಶೇಷ ಸ್ಥಾನಮಾನ ಸಿಕ್ಕರೂ ಅಭಿವೃದ್ಧಿಯಲ್ಲಿ ಹಿಂದುಳಿದ ಕಲ್ಯಾಣ ಕರ್ನಾಟಕ



**ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಸಂವಿಧಾನದ 371ನೇ ವಿಧಿಯಡಿ ವಿಶೇಷ ಸ್ಥಾನಮಾನ ಪಡೆದು ಹಲವು ವರ್ಷಗಳು ಕಳೆದರೂ ಕಲ್ಯಾಣ ಕರ್ನಾಟಕ ಭಾಗ ಇನ್ನೂ ನಿರೀಕ್ಷಿತ ಮಟ್ಟದ ಸರ್ವಾಂಗೀಣ ಅಭಿವೃದ್ಧಿ ಸಾಧಿಸಿಲ್ಲ ಎಂದು ಪುರಸಭೆ ಅಧ್ಯಕ್ಷೆ ರೇಷ್ಮಾ ಸಿಕಂದರ್ ವಿಷಾದ ವ್ಯಕ್ತಪಡಿಸಿದರು.

ಹೈದರಾಬಾದ್ ಕರ್ನಾಟಕ ವಿಮೋಚನಾ ದಿನದ 79ನೇ ವರ್ಷಾಚರಣೆ ಅಂಗವಾಗಿ ಪಟ್ಟಣದ ಪುರಸಭೆಯಲ್ಲಿ ಆಯೋಜಿಸಿದ್ದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕವೆಂದು ಘೋಷಣೆಯಾಗಿ ಸುಮಾರು 13 ವರ್ಷಗಳು ಕಳೆದಿವೆ. ಆದರೂ ಈ ಭಾಗದ ಅಭಿವೃದ್ಧಿಯ ವೇಗ ನಿರೀಕ್ಷಿತ ಮಟ್ಟದಲ್ಲಿಲ್ಲ. ಶಿಕ್ಷಣ, ಉದ್ಯೋಗ, ಕೈಗಾರಿಕೆ, ಮೂಲಸೌಕರ್ಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಇನ್ನಷ್ಟು ಗಮನ ಹರಿಸುವ ಅಗತ್ಯವಿದೆ ಎಂದರು.

ವಿಶೇಷ ಸ್ಥಾನಮಾನ ದೊರೆತಿರುವುದರ ಉದ್ದೇಶ ಕೇವಲ ಅನುದಾನ ನೀಡುವುದಕ್ಕೆ ಸೀಮಿತವಾಗಬಾರದು. ಈ ಭಾಗದ ಜನರಿಗೆ ಗುಣಮಟ್ಟದ ಶಿಕ್ಷಣ, ಸ್ಥಳೀಯವಾಗಿ ಉದ್ಯೋಗಾವಕಾಶ ಹಾಗೂ ಸುಸ್ಥಿರ ಅಭಿವೃದ್ಧಿ ದೊರೆಯುವಂತೆ ಯೋಜನೆಗಳನ್ನು ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಹೇಳಿದರು.

ಪುರಸಭೆ ಮುಖ್ಯಾಧಿಕಾರಿ ಎಂ.ಕೆ. ಮುಗಳಿ ಮಾತನಾಡಿ, ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಿಗೆ ಸಂವಿಧಾನದ 371ನೇ ವಿಧಿಯಡಿ ವಿಶೇಷ ಸ್ಥಾನಮಾನ ಕಲ್ಪಿಸಲಾಗಿದೆ.

ಮೂಲಸೌಕರ್ಯ, ಕೃಷಿ, ನೀರಾವರಿ, ಶಿಕ್ಷಣ ಹಾಗೂ ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಸರ್ಕಾರ ಅನುದಾನ ಒದಗಿಸುತ್ತಿದೆ ಎಂದರು.

ಬೆಂಗಳೂರು ಭಾಗದಂತೆ ಕಲ್ಯಾಣ ಕರ್ನಾಟಕದಲ್ಲೂ ಐಟಿ ಮತ್ತು ಬಿಟಿ ಕ್ಷೇತ್ರಗಳು ಹಾಗೂ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಸ್ಥಳೀಯ ಯುವಕರಿಗೆ ಉದ್ಯೋಗ ಸೃಷ್ಟಿಯಾಗುವಂತಹ ಅವಕಾಶಗಳು ಹೆಚ್ಚಾದಾಗ ಮಾತ್ರ ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡಲು ಸಾಧ್ಯ ಎಂದು ಹೇಳಿದರು.

> ವಿಶೇಷ ಸ್ಥಾನಮಾನ ದೊರೆತಿದ್ದರೂ ಕಲ್ಯಾಣ ಕರ್ನಾಟಕ ಇನ್ನೂ ನಿರೀಕ್ಷಿತ ಮಟ್ಟದ ಅಭಿವೃದ್ಧಿ ಕಂಡಿಲ್ಲ. ಶಿಕ್ಷಣ, ಉದ್ಯೋಗ ಮತ್ತು ಕೈಗಾರಿಕಾ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ.
>
> – ರೇಷ್ಮಾ ಸಿಕಂದರ್, ಪುರಸಭೆ ಅಧ್ಯಕ್ಷೆ

## ಸೆ.21ರಂದು ಗಂಧ, 22ರಂದು ಉರುಸು; ಸೆ.23ರಂದು ತವಾಫ್

# ಶಿರಹಟ್ಟಿಯಲ್ಲಿ ಭಾವೈಕ್ಯತೆಯ ಉರುಸು ಸಂಭ್ರಮ



**ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಪಟ್ಟಣದ ಹಿಂದೂ-ಮುಸ್ಲಿಂ ಭಾವೈಕ್ಯತೆಯ ಪ್ರತೀಕವಾಗಿರುವ ಶ್ರೀ ಹಜರತ್ ಮೆಹಬೂಬ್ ಸುಭಾನಿ (ರಹ) ದರ್ಗಾದ ಉರುಸು ಮುಬಾರಕ್ ಸಂಭ್ರಮದಿಂದ ಜರುಗುತ್ತಿದೆ.

ಈ ಕುರಿತು ದರ್ಗಾದ ಮುಜಾವರರಾದ ಮೊಹಮ್ಮದ್ ಖುರೇಶ್ ಮನಿಯಾರ ಮಾತನಾಡಿ, ಸೆ.21ರಂದು ಸೋಮವಾರ ಗಂಧ (ಸಂದಾಲ್), ಸೆ.22ರಂದು ಮಂಗಳವಾರ ಉರುಸು ಹಾಗೂ ಸೆ.23ರಂದು ಬುಧವಾರ ತವಾಫ್ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದ್ದಾರೆ. ಪುಣ್ಯಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸಿ ಪೀರಾನೇ ಪೀರ ಹಜರತ್ ಮೆಹಬೂಬ್ ಸುಭಾನಿ (ರಹ) ಅವರ ಕೃಪಾಕಟಾಕ್ಷಕ್ಕೆ ಪಾತ್ರರಾಗುವಂತೆ ಅವರು ಮನವಿ ಮಾಡಿದ್ದಾರೆ.

ಹಜರತ್ ಮೆಹಬೂಬ್ ಸುಭಾನಿ ಉರುಸು ಮುಬಾರಕ್ ಜಾತಿ, ಮತ, ಪಂಥಗಳ ಭೇದವಿಲ್ಲದೆ ಎಲ್ಲರೂ ಒಗ್ಗೂಡಿ ಆಚ-ರಿಸುವ ಭಾವೈಕ್ಯತೆಯ ಸಂಕೇತವಾಗಿದೆ. ಮುಸ್ಲಿಂ ಬಾಂಧವ-ರಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಹಿಂದೂ ಸಹೋದರರು ಸೇರಿದಂತೆ ವಿವಿಧ ಜಿಲ್ಲೆಗಳು ಹಾಗೂ ರಾಜ್ಯಗಳಿಂದ ಭಕ್ತಾಧಿಗಳು ಈ ಪುಣ್ಯಕ್ಷೇತ್ರಕ್ಕೆ ಆಗಮಿಸುತ್ತಾರೆ ಎಂದು ದರ್ಗಾದ ಭಕ್ತರಾದ ನಜೀರ ಅಹಮದ್ ಡಂಬಳ ಹೇಳಿದರು.

ಉರುಸು ಹಿನ್ನೆಲೆಯಲ್ಲಿ ದರ್ಗಾದ ಮುಜಾವರಾದ ಅಸಗರಅಲಿ ಮನಿಯಾರ, ಅಬ್ರು ಮನಿಯಾರ, ಹಜರತಲಿ ಮನಿಯಾರ ಹಾಗೂ ಭಕ್ತರಾದ ಮಾಬುಸಾಬ ಕುಬಸದ, ರಿಯಾಜ್ ತಹಶೀಲ್ದಾರ, ಸಾದಿಕ್ ಮುಳಗುಂದ, ರಿಯಾಜ್ ಲಕ್ಷ್ಮೇಶ್ವರ, ಬಶೀರ್ ಪಟಾವೇಗಾರ, ಜಾಫರ್ ಅತ್ತಾರ, ಹಸನ್ ತಹಶೀಲ್ದಾರ್, ದಾದಾಪೀರ ಪರೀಟ್ ಸೇರಿದಂತೆ ಹಲವು ಭಕ್ತಾಧಿಗಳು ಉಪಸ್ಥಿತರಿದ್ದರು.

# ಧರ್ಮವೇ ಬದುಕಿನ ದಾರಿ: ರಂಭಾಪುರಿ ಜಗದ್ಗುರು



**ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ**

ಮಾನವ ಜೀವನದ ಉಜ್ವಲ ಭವಿಷ್ಯಕ್ಕೆ ಗುರು ಪರಂಪರೆ ಮುಖ್ಯ. ಧರ್ಮ ನಮ್ಮ ಬದುಕಿನ ದಾರಿಯಾದರೆ, ಸಂಸ್ಕೃತಿ ನಮ್ಮ ಶಕ್ತಿ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಹೇಳಿದರು.

ನಗರದ ಶ್ರೀ ಗುರು ಮಧ್ವ ಮಂಟಪದಲ್ಲಿ ಶುಕ್ರವಾರ ನಡೆದ ಜನಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಧರ್ಮವು ಮನುಷ್ಯನಿಗೆ ಸತ್ಯ, ನೀತಿ, ಸಂಯಮ ಹಾಗೂ ಸದಾಚಾರದ ಮಾರ್ಗವನ್ನು ತೋರಿಸುತ್ತದೆ. ಗುರು-ಸಂತರ ಮಾರ್ಗದರ್ಶನದಲ್ಲಿ ನಡೆಯುವ ಇಂತಹ ಸಮಾರಂಭಗಳು ಸಮಾಜದಲ್ಲಿ ಭಕ್ತಿ ಹಾಗೂ ಧಾರ್ಮಿಕ ಪ್ರಜ್ಞೆಯೊಂದಿಗೆ ಪರಸ್ಪರ ಪ್ರೀತಿ, ಸೌಹಾರ್ದ ಮತ್ತು ಸಹೋದರತ್ವವನ್ನು ಬೆಳೆಸುತ್ತವೆ ಎಂದರು.

ಮಕ್ಕಳಲ್ಲಿ ಸಂಸ್ಕಾರ, ಯುವಜನರಲ್ಲಿ ಧರ್ಮಪ್ರಜ್ಞೆ ಹಾಗೂ ಸಮಾಜದಲ್ಲಿ ಒಗ್ಗಟ್ಟು ಮೂಡಿಸುವ ಮಹತ್ಕಾರ್ಯವನ್ನು ಶ್ರೀ ರಂಭಾಪುರಿ ಪೀಠ ಸಂಕಲ್ಪ ಹೊಂದಿದೆ. ಸಕಲ ಜೀವಾತ್ಮರ ಒಳಿತನ್ನು ಬಯಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಸಂದೇಶಗಳು ಎಲ್ಲ ಕಾಲಕ್ಕೂ, ಎಲ್ಲರಿಗೂ ಅನ್ವಯಿಸುತ್ತವೆ. ಪಿ.ಕೆ.ಎಂ. ಪ್ರಶಾಂತ ಅವರ ಧರ್ಮನಿಷ್ಠೆ, ಶ್ರದ್ಧೆ ಹಾಗೂ ಗುರುಭಕ್ತಿ ಇತರರಿಗೆ ಮಾದರಿಯಾಗಿದೆ ಎಂದು ಹೇಳಿದರು.

ತೆಗ್ಗಿನಮಠ ಸಂಸ್ಥಾನದ ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಬದುಕುವ ಜನಾಂಗಕ್ಕೆ ಧರ್ಮ ದಾರಿದೀಪ. ಆಧುನಿಕತೆಯ ಹೆಸ-ರಿನಲ್ಲಿ ನಮ್ಮ ಸಂಸ್ಕೃತಿ ಕಲುಷಿತಗೊಳ್ಳಬಾರದು ಎಂದರು.

ಹಂಪಸಾಗರ ನವಲಿ ಹಿರೇಮಠದ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಗುರುವಿನ ಜ್ಞಾನಾಮೃತದಿಂದ ಜೀವನ ಪಾವನಗೊಳ್ಳುತ್ತದೆ. ಗುರು ಮತ್ತು ಗುರಿಯನ್ನು ಹೊಂದಿ ಜೀವನ ಸಾಗಿಸಿದರೆ ಬಾಳು ಉಜ್ವಲಗೊಳ್ಳುತ್ತದೆ ಎಂದರು.

ಪಿ.ಕೆ.ಎಂ. ನಾಗಲಿಂಗಯ್ಯ, ಪಿ.ಕೆ.ಎಂ. ಶಂಭುಲಿಂಗಯ್ಯ ಹಾಗೂ ಶ್ರೀಮತಿ ಗಿರಿಜಮ್ಮ ಚನ್ನವೀರಯ್ಯ ಉಪಸ್ಥಿತರಿದ್ದರು. ಡಾ. ಪಿ.ಕೆ.ಎಂ. ಪ್ರಶಾಂತ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಂ.ಪಿ.ಎಂ. ಶಾಂತವೀರಯ್ಯ ನಿರೂಪಿಸಿದರು.

# ಕ್ರೀಡಾಕೂಟದಲ್ಲಿ ಶ್ರವಣದೌರ್ಬಲ್ಯ ಮಕ್ಕಳ ಮಿಂಚು



**ವಿಜಯಸಾಕ್ಷಿ ಸುದ್ದಿ, ನರೇಗಲ್ಲ**


ಪಟ್ಟಣದ ಎಸ್.ಎ.ವಿ.ವಿ.ಪಿ. ಸಮಿತಿಯ ಶ್ರವಣದೌರ್ಬಲ್ಯ ಮಕ್ಕಳ ವಸತಿಯುತ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ನರೇಗಲ್ಲ ವಲಯ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟದಲ್ಲಿ ವಿವಿಧ ಕ್ರೀಡೆಗಳಲ್ಲಿ ಉತ್ತಮ ಪ್ರದರ್ಶನ ನೀಡಿ ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಸಮೀಪದ ಜಕ್ಕಲಿ ಗ್ರಾಮದ ಎಸ್.ಎ.ಜೆ.ಡಿ. ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಗುರುವಾರ ನಡೆದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಗಮನಾರ್ಹ ಸಾಧನೆ ಮಾಡಿದರು.

100 ಮೀಟರ್ ಓಟದಲ್ಲಿ ದೇವರಾಜ ಪ್ರಥಮ, ಲಾಂಗ್ ಜಂಪ್‌ನಲ್ಲಿ ಪ್ರೀತಮಗೌಡ ಪ್ರಥಮ ಹಾಗೂ ರಿಲೇ ಓಟದಲ್ಲಿ ಮಹ್ಮದ್ ಇಶಾನ್ ಪ್ರಥಮ ಸ್ಥಾನ ಪಡೆದಿದ್ದಾರೆ. ಅಡತಡೆ ಓಟದಲ್ಲಿ ಮಹ್ಮದ್ ಇಶಾನ್ ದ್ವಿತೀಯ, 200 ಮೀಟರ್ ಓಟದಲ್ಲಿ ಪ್ರಜ್ವಲ್ ತೃತೀಯ ಹಾಗೂ 400 ಮೀಟರ್ ಓಟದಲ್ಲಿ ದೇವರಾಜ ತೃತೀಯ ಸ್ಥಾನ ಗಳಿಸಿದ್ದಾರೆ. ವಿಶೇಷ ಚೇತನ ಮಕ್ಕಳಿಗೆ ಕ್ರೀಡಾಕ್ಷೇತ್ರದಲ್ಲಿಯೂ ಸಮಾನ ಅವಕಾಶ, ಸೂಕ್ತ ತರಬೇತಿ ಹಾಗೂ ಪ್ರೋತ್ಸಾಹ ದೊರೆತರೆ ತಮ್ಮಲ್ಲಿರುವ ಪ್ರತಿಭೆಯನ್ನು ಸಮರ್ಥವಾಗಿ ಪ್ರದರ್ಶಿಸಬಲ್ಲರು ಎಂಬುದಕ್ಕೆ ವಿದ್ಯಾರ್ಥಿಗಳ ಈ ಸಾಧನೆ ಸಾಕ್ಷಿಯಾಗಿದೆ.

ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಜಗದ್ಗುರು ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು, ಪ್ರಧಾನ ಕಾರ್ಯದರ್ಶಿ, ಆಡಳಿತಾಧಿಕಾರಿ, ಚೇರ್‌ಮನ್, ಮಂಡಳಿ ಸದಸ್ಯರು, ಮುಖ್ಯೋಪಾಧ್ಯಾಯರು, ಸಿಬ್ಬಂದಿ ವರ್ಗ ಹಾಗೂ ಪಾಲಕರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ವೀರಗಾಸೆ ವೈಭವದಲ್ಲಿ 'ರುದ್ರಾಭಿಷೇಕಂ' ಟ್ರೇಲರ್ ಬಿಡುಗಡೆ



**ವಿಜಯಸಾಕ್ಷಿ ಸುದ್ದಿ, ಬೆಂಗಳೂರ**

ವಿಜಯರಾಘವೇಂದ್ರ ಅಭಿನಯದ, ಫ್ಯಾನ್ ಇಂಡಿಯಾ ಕ್ರಿಯೇಷನ್ಸ್ ವಿಜಯಪುರ ನಿರ್ಮಾಣದ 'ರುದ್ರಾಭಿಷೇಕಂ' ಚಿತ್ರದ ಟ್ರೇಲರ್ ಬೆಂಗಳೂರಿನ ಜಿಟಿ ಮಾಲ್‌ನಲ್ಲಿ ಬಿಡುಗಡೆಯಾಯಿತು. ಚಿತ್ರ ಸೆ.25ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.

ನಾಡಿನ ಕಲೆ ಹಾಗೂ ಸಾಂಸ್ಕೃತಿಕ ಪರಂಪರೆಯ ಪ್ರಮುಖ ಕಲೆಗಳಲ್ಲಿ ಒಂದಾದ ವೀರಗಾಸೆಯನ್ನು ಆರಾಧಿಸುವ ಕುಟುಂಬದ ಕಥಾಹಂದರ ಹೊಂದಿರುವ ಚಿತ್ರವು ವೀರಭದ್ರ ದೇವರ ಇತಿಹಾಸವನ್ನೂ ಒಳಗೊಂಡಿದೆ. ಚಿತ್ರದಲ್ಲಿ ವೀರಗಾಸೆ ಕುಣಿತ ವಿಶೇಷ ಆಕರ್ಷಣೆಯಾಗಿದ್ದು, ವಿಜಯರಾಘವೇಂದ್ರ ಅವರು ವೀರಗಾಸೆಯ ವಿಭಿನ್ನ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ವಿಜಯರಾಘವೇಂದ್ರ, "ಇದೊಂದು ದೈವ ಕಲ್ಪನೆಯ ಸಾಮಾಜಿಕ ಚಿತ್ರ. ತಂದೆ ಮತ್ತು ಮಗನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದೇನೆ. ವಿಶೇಷ ಪಾತ್ರ ಎನಿಸಿದ್ದರಿಂದ ಈ ಸಿನಿಮಾವನ್ನು ಒಪ್ಪಿಕೊಂಡೆ" ಎಂದರು.

ಸಂಗೀತ ನಿರ್ದೇಶಕ ಹಾಗೂ ನಟ ವಿ. ಮನೋಹರ್ ಮಾತನಾಡಿ, ಸಂಗೀತ ನೀಡುವುದರ ಜೊತೆಗೆ ಚಿತ್ರದಲ್ಲಿ ವಿಭಿನ್ನ ಪಾತ್ರವೊಂದರಲ್ಲಿ ಕಾಣಿಸಿಕೊಂಡಿರುವುದಾಗಿ ತಿಳಿಸಿದರು. ಮೇಕಪ್ ನಂತರ ತಮ್ಮ ಲುಕ್‌ನ್ನೇ ಕಂಡು ತಮಗೆ ಅಚ್ಚರಿಯಾಯಿತು ಎಂದರು.

ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು ಮಾತನಾಡಿ, ವಿಜಯರಾಘವೇಂದ್ರ ಅವರ ಪಾತ್ರಕ್ಕೆ ಹೊಂದುವಂತೆ ವಿಭಿನ್ನ ಹೊಡೆದಾಟದ ಸಾಹಸ ದೃಶ್ಯಗಳನ್ನು ರೂಪಿಸಿರುವುದಾಗಿ ಹೇಳಿದರು.

ನಿರ್ದೇಶಕ ಕೆ. ವಸಂತ್ ಕುಮಾರ್ ಮಾತನಾಡಿ, ಚಿತ್ರೀಕರಣದ ಸಂದರ್ಭದಲ್ಲಿ ಹಲವು ಅಡೆತಡೆಗಳು ಎದುರಾದರೂ ಅವುಗಳನ್ನು ಮೆಟ್ಟಿನಿಂತು ಚಿತ್ರವನ್ನು ಪೂರ್ಣಗೊಳಿಸಲಾಗಿದೆ. ಈಗಾಗಲೇ ಚಿತ್ರದ ಹಾಡುಗಳು ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿವೆ ಎಂದರು.

ಚಿತ್ರದಲ್ಲಿ ವಿಜಯರಾಘವೇಂದ್ರ, ನಾಯಕಿ ಪ್ರಿಯಾಂಕ ತಿಮ್ಮೇಶ, ಬಲರಾಜ್‌ವಾಡಿ, ಶಂಕರ ನಾರಾಯಣ್, ಮೈಸೂರು ಬಸವರಾಜ್, ಬ್ಯಾಂಕ್ ಪ್ರಸಾದ, ಮನು, ಬುಲೆಟ್ ವಿನು, ವಿನಯ್, ಸನತ್, ಸಂದೀಪ್, ಮಹಾಲಿಂಗ್ ಹೂಗಾರ್, ಸೌಂದರ್ಯ, ನವನೀತ, ಮಮತಾ, ಮಂಜುಳಾ, ಧನಲಕ್ಷ್ಮಿ, ಸ್ವಾತಿ ಸೇರಿದಂತೆ ಹಲವರು ಅಭಿನಯಿಸಿದ್ದಾರೆ.

ಮುತ್ತುರಾಜ್ ಛಾಯಾಗ್ರಹಣ ಹಾಗೂ ಸಂಕಲನ, ವಿ. ಮನೋಹರ್ ಸಂಗೀತ, ಭಜರಂಗಿ ಮೋಹನ್ ನೃತ್ಯ ಸಂಯೋಜನೆ, ಥ್ರಿಲ್ಲರ್ ಮಂಜು ಸಾಹಸ, ಬಾಬುಖಾನ್ ಕಲಾ ನಿರ್ದೇಶನ, ನೊಣವಿನಕೆರೆ ಕುಮಾರ್ ಪ್ರಸಾಧನ ಹಾಗೂ ಪಶುಪತಿ ವಸ್ತ್ರಾಲಂಕಾರ ನಿರ್ವಹಿಸಿದ್ದಾರೆ. ನಾಗೇಂದ್ರ, ಡಾ. ಪ್ರಭು ಗಂಜಿಹಾಳ ಹಾಗೂ ಡಾ. ವೀರೇಶ್ ಹಂಡಿಗಿ ಸಾರ್ವಜನಿಕ ಸಂಪರ್ಕ ಕಾರ್ಯ ನಿರ್ವಹಿಸಿದ್ದಾರೆ.

ಮನು ಮತ್ತು ಧೀರಜ್ ಸಹನಿರ್ದೇಶಕರಾಗಿದ್ದಾರೆ. ಚಿತ್ರಕಥೆ, ಸಾಹಿತ್ಯ ಹಾಗೂ ನಿರ್ದೇಶನ ಕೆ. ವಸಂತ್ ಕುಮಾರ್ ಅವರದು.

ಎನ್. ಜಯರಾಮ್, ಕೆ.ಎನ್. ಮಂಜುನಾಥ್, ಕೆ. ವೆಂಕಟೇಶ್, ಬಿ. ಚಿದಾನಂದ ಮೂರ್ತಿ, ಸುರೇಶ್ ಬಾಬು, ಕೆ.ಎಸ್. ರವಿ, ಬಿ.ಕೆ. ಅಶ್ವತ್ ನಾರಾಯಣ, ಡಾ. ಎಂ. ಶಿವಕುಮಾರ ಹಾಗೂ ಕುಸುಮಾ ವಸಂತಕುಮಾರ ಅವರು ಚಿತ್ರದ ನಿರ್ಮಾಪಕರಾಗಿದ್ದಾರೆ.

# ವಿಶ್ವಕರ್ಮರು ಬ್ರಹ್ಮಾಂಡದ ಸೃಷ್ಟಿಕರ್ತರು



**ವಿಜಯಸಾಕ್ಷಿ ಸುದ್ದಿ, ಹುಲಕೋಟಿ**

ವಿಶ್ವಕರ್ಮನು ದೇವತೆಗಳಿಗೆ ವಿವಿಧ ಆಯುಧಗಳು ಹಾಗೂ ವಸ್ತುಗಳನ್ನು ನಿರ್ಮಿಸಿಕೊಟ್ಟ ದೇವಶಿಲ್ಪಿ ಎಂದು ಪುರಾಣಗಳಲ್ಲಿ ಉಲ್ಲೇಖವಿದೆ. ವೇದೋಕ್ತ ಪರಬ್ರಹ್ಮ ಸ್ವರೂಪನಾದ ವಿಶ್ವಕರ್ಮನಿಗೆ ಜನನ-ಮರಣಗಳಿಲ್ಲ ಎಂಬ ನಂಬಿಕೆಯಿದ್ದು, ಹೀಗಾಗಿ ವಿಶ್ವಕರ್ಮ ಪೂಜೆಯನ್ನು ಮಹತ್ವದಿಂದ ಆಚ-ರಿಸಲಾಗುತ್ತದೆ ಎಂದು ಇತಿಹಾಸ ವಿಭಾಗದ ಉಪನ್ಯಾಸಕ ಡಾ. ಶಂಕ್ರಪ್ಪ ಬಡಿಗೇರ ಹೇಳಿದರು.

ಹುಲಕೋಟಿಯ ಶ್ರೀ ಕೆ.ಎಚ್. ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಶ್ರೀ ವಿರಾಟ ವಿಶ್ವಕರ್ಮ ಪೂಜಾ ಸಮಾರಂಭದಲ್ಲಿ ಮಾತನಾಡಿದ ಅವರು, ವಿಶ್ವಕರ್ಮನ ಆರಾಧನೆಯ ಮಹತ್ವ ಹಾಗೂ ಹಿನ್ನೆಲೆಯನ್ನು ವಿವರಿಸಿದರು. ಪ್ರತಿವರ್ಷ ಸೆ.17ರಂದು ವಿಶ್ವಕರ್ಮ ಪೂಜೆಯನ್ನು ಆಚ-ರಿಸಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಅಪ್ಪಣ್ಣ ಎನ್. ಹಂಜೆ ಮಾತನಾಡಿ, 'ವಿಶ್ವಕರ್ಮ' ಎಂದರೆ 'ಎಲ್ಲವನ್ನೂ ಸಾಧಿಸುವವನು' ಎಂಬ ಅರ್ಥವಿದೆ. ಋಗ್ವೇದದ ಪ್ರಕಾರ ವಿಶ್ವಕರ್ಮನು ಸೃಷ್ಟಿಯ ದೇವತೆಯ ಅಮೂರ್ತ ರೂಪವಾಗಿದ್ದು, ವಿಶ್ವಕರ್ಮ ಸಮುದಾಯದವರು, ಅಭಿಯಂತರರು, ಕುಶಲಕರ್ಮಿಗಳು ಹಾಗೂ ವಾಸ್ತುಶಿಲ್ಪಿಗಳ ಪ್ರಧಾನ ದೇವತೆಯಾಗಿ ಆರಾಧಿಸುತ್ತಾರೆ ಎಂದರು.

ವಿಶ್ವಕರ್ಮನು ಬ್ರಹ್ಮಾಂಡದ ಪ್ರಧಾನ ವಾಸ್ತುಶಿಲ್ಪಿ ಎಂಬ ನಂಬಿಕೆಯಿದೆ. ವಿಶ್ವಕರ್ಮ ಪೂಜೆಯ ಮಹತ್ವ ಕೇವಲ ಧಾರ್ಮಿಕ ಆಚರಣೆಗೆ ಸೀಮಿತವಾಗದೆ, ಕಾಯಕ, ಕೌಶಲ್ಯ, ಕೈಗಾರಿಕೆ ಹಾಗೂ ಸೃಜನಶೀಲತೆಯ ಗೌರವವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಹುಲಕೋಟಿಯ ವಿಶ್ವಕರ್ಮ ಪರಿವಾರದ ನಾಗಲಿಂಗ ಬಡಿಗೇರ ಹಾಗೂ ಭೀಮಣ್ಣ ಬಡಿಗೇರ ಅವರು ಶ್ರೀ ವಿರಾಟ ವಿಶ್ವಕರ್ಮರ ಭಾವಚಿತ್ರವನ್ನು ಕಾಲೇಜಿಗೆ ದಾನ ಮಾಡಿ, ಪ್ರತಿವರ್ಷ ಕಾಲೇಜಿನಲ್ಲಿ ಕಾರ್ಯಕ್ರಮ ಆಯೋಜಿಸುವಂತೆ ವಿನಂತಿಸಿದರು.

ಸಾಂಸ್ಕೃತಿಕ ಘಟಕದ ಸಂಯೋಜಕ ರಮೇಶ ಹುಲಕುಂದ ಪ್ರಾಸ್ತಾವಿಕವಾಗಿ ಮಾತನಾಡಿದರು. ರೇಂಜರ್ಸ್ ಘಟಕದ ಸಂಯೋಜಕಿ ಕುಮಾರಿ ಸಾವಿತ್ರಿ ಟಿ. ವಂದಿಸಿದರು. ಬಸವಂತಪ್ಪ ದೊಡ್ಡಮನಿ ನಿರೂಪಿಸಿದರು. ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸಣ್ಣ ಸುದ್ದಿಗಳು

### ನಿಧನ ಸುರೇಖಾ ಮಾನ್ವಿ



ಲಕ್ಷ್ಮೇಶ್ವರ: ಪಟ್ಟಣದ ಗಣ್ಯ ಮನೆತನದ ಹಿರಿಯ ಜೀವಿ ಹಾಗೂ ಸಮಾಜ ಸೇವಕಿ ಸುರೇಖಾ ರಾಜಶೇಖರ ಮಾನ್ವಿ (64) ಅವರು ಶುಕ್ರವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ನೆರವೇರಿತು. ಮಠಾಧೀಶರು, ಗಣ್ಯರು ಹಾಗೂ ಜನಪ್ರತಿನಿಧಿಗಳು ಸುರೇಖಾ ಮಾನ್ವಿ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

### ಜಿಲ್ಲಾ ಮಟ್ಟದ ಚದುರಂಗದಲ್ಲಿ ಶೇಖಪ್ಪ ಲಮಾಣಿ ಪ್ರಥಮ



ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಮೀಪದ ಯಲ್ಲಾಪುರ ಸರ್ಕಾರಿ ಪ್ರೌಢಶಾಲೆಯ 9ನೇ ತರಗತಿ ವಿದ್ಯಾರ್ಥಿ ಶೇಖಪ್ಪ ಚೆನ್ನಪ್ಪ ಲಮಾಣಿ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆಯಲ್ಲಿ ಪ್ರಥ-'ಮ ಸ್ಥಾನ ಪಡೆದು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ. ವಿದ್ಯಾರ್ಥಿಯ ಸಾಧನೆಗೆ ಶಾಲೆಯ ಮುಖ್ಯಶಿಕ್ಷಕರು, ಶಿಕ್ಷಕ ವೃಂದ, ಎಸ್‌ಡಿಎಂಸಿ ಸದಸ್ಯರು ಹಾಗೂ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

## ಪುಲಿಗೆರೆ ಯುವ ವೇದಿಕೆ ಗೌರವ; ಅಂದ-ಅಲಂಕಾರಕ್ಕೆ ಪ್ರೋತ್ಸಾಹ

# ಗಣೇಶೋತ್ಸವಕ್ಕೆ ಬಹುಮಾನಗಳ ಮೆರುಗು

ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದಲ್ಲಿ ಸಾರ್ವಜನಿಕವಾಗಿ ಪ್ರತಿಷ್ಠಾಪಿಸಿದ್ದ ಗಣೇಶೋತ್ಸವ ಮಂಡಳಿಗಳ ಸೃಜನಶೀಲತೆ ಹಾಗೂ ಅಂದ-ಅಲಂಕಾರಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಪುಲಿಗೆರೆ ಯುವ ವೇದಿಕೆ ವತಿಯಿಂದ ವಿವಿಧ ವಿಭಾಗಗಳಲ್ಲಿ ಆಯ್ಕೆಗೊಂಡ ಮಂಡಳಿಗಳಿಗೆ ನಗದು ಬಹುಮಾನ ಹಾಗೂ ಆಕರ್ಷಕ ಟ್ರೋಫಿಗಳನ್ನು ವಿತರಿಸಲಾಯಿತು.

ಪುರಸಭೆ ಆವರಣದಲ್ಲಿ ಗುರುವಾರ ನಡೆದ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಹಾವೇರಿ ಲೋಕಸಭಾ ಕ್ಷೇತ್ರದ ಯುವ ಮುಖಂಡ ಆನಂದಸ್ವಾಮಿ ಗಡ್ಡದೇವರಮಠ ಮಾತನಾಡಿ, ಸ್ವಾತಂತ್ರ್ಯಪೂರ್ವದಲ್ಲಿ ಜನರನ್ನು ಸಂಘಟಿಸುವ ಹಾಗೂ ಒಗ್ಗೂಡಿಸುವ ಉದ್ದೇಶದಿಂದ ಬಾಲಗಂಗಾಧರ ತಿಲಕರು ಸಾರ್ವಜನಿಕ ಗಣೇಶೋತ್ಸವಕ್ಕೆ ಚಾಲನೆ ನೀಡಿದ್ದರು. ಭಾರತೀಯ ಸಂಸ್ಕೃತಿ ಹಾಗೂ ಸಂಪ್ರದಾಯಗಳ ಪ್ರತೀಕವಾಗಿರುವ ಗಣೇಶೋತ್ಸವಕ್ಕೆ ವಿಶೇಷ ಮಹತ್ವವಿದ್ದು, ಪ್ರಸಕ್ತ ಬರಗಾಲದ ಸಂಕಷ್ಟ ದೂರವಾಗಿ ರೈತರು ಸೇರಿದಂತೆ ಎಲ್ಲರಿಗೂ ನೆಮ್ಮದಿ ದೊರೆಯಲಿ ಎಂದು ಗಣೇಶನಲ್ಲಿ ಪ್ರಾರ್ಥಿಸೋಣ ಎಂದರು.



ಬಿಜೆಪಿ ಮುಖಂಡ ಐ.ಎಸ್. ಪೂಜಾರ ಮಾತನಾಡಿ, ಗಣೇಶೋತ್ಸವ ಹಿಂದೂಗಳ ಪಾಲಿಗೆ ಪ್ರಮುಖ ಧಾರ್ಮಿಕ ಹಬ್ಬವಾಗಿದೆ. ಇದು ಕೇವಲ ಆಚರಣೆಯಲ್ಲ; ನಂಬಿಕೆ ಮತ್ತು ಭಕ್ತಿಯ ಪ್ರತೀಕ. ಬರಗಾಲದಿಂದ ಸಂಕಷ್ಟದಲ್ಲಿರುವ ರೈತ ಸಮುದಾಯಕ್ಕೆ ಒಳಿತಾಗಲಿ ಎಂದು ಪ್ರಾರ್ಥಿಸುವುದರ ಜೊತೆಗೆ ಗಣೇಶನನ್ನು ಧಾರ್ಮಿಕ ಪದ್ಧತಿಯಂತೆ ಪ್ರತಿಷ್ಠಾಪಿಸಿ ಉತ್ಸವ ಆಚ-ರಿಸುವುದಕ್ಕೆ ಆದ್ಯತೆ ನೀಡಬೇಕು ಎಂದರು.

**ಅಂದ-ಅಲಂಕಾರಕ್ಕೆ ಮನ್ನಣೆ:** ಮೂರ್ತಿಯ ಅಂದ ವಿಭಾಗದಲ್ಲಿ ಹಳ್ಳದಕೇರಿ ಆಂಜನೇಯ ಯುವಕ ಮಂಡಳ (ಮಾರು ದೇವಸ್ಥಾನದ ಹತ್ತಿರ) ಪ್ರಥಮ, ಸನಾತನ ಯುವಕ ಮಂಡಳ ಸೊಪ್ಪಿನಕೇರಿ ಓಣಿ ದ್ವಿತೀಯ ಹಾಗೂ ಹಿಂದೂ ಮಹಾಸಭಾ ಗಣಪತಿ ತೃತೀಯ ಸ್ಥಾನ ಪಡೆದವು.

ವೇದಿಕೆ ಅಲಂಕಾರ ವಿಭಾಗದಲ್ಲಿ ಬಸ್ತಿಬಣದ ಗಜಾನನ ಯುವಗೆಳೆಯರ ಬಳಗದ 'ರೈತ ಗಣೇಶ' ಪ್ರಥಮ, ಕದರಗೇರಿ ಓಣಿಯ ಗಜಾನನ ಯುವಕ ಮಂಡಳ ದ್ವಿತೀಯ ಹಾಗೂ ಸುಣಗಾರ ಓಣಿಯ ಗಂಗಾಮಾತಾ ಸಮಾಜದ ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಮಂಡಳ ತೃತೀಯ ಸ್ಥಾನ ಗಳಿಸಿದವು.

ಹಲವು ಗಣೇಶೋತ್ಸವ ಮಂಡಳಿಗಳು ಉತ್ಸಾಹದಿಂದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದವು. ಹಿರಿಯ ಸಾಹಿತಿ ಸಿ.ಜಿ. ಹಿರೇಮಠ, ಸಂತೋಷ ಕ್ಯಾದಿಗೇರಿ ಹಾಗೂ ಪ್ರವೀಣ ಗಾಯಕ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು.

ಪುಲಿಗೆರೆ ಯುವ ವೇದಿಕೆ ಅಧ್ಯಕ್ಷ ಸಂತೋಷ ತೇಲಿ, ಬಸವರಾಜ ಬೆಂಡಿಗೇರಿ, ಈರಣ್ಣ ಪೂಜಾರ, ಫಕ್ಕಿರೇಶ ಅಣ್ಣಿಗೇರಿ, ಬಸವರಾಜ ಬಾಳೇಶ್ವರಮಠ, ಆನಂದ ಮೆಕ್ಕಿ, ಪಂಚಾಕ್ಷರಯ್ಯ ಸಾಲಿಮಠ, ಮಾಂತೇಶ ಕರಮಣ್ಣವರ, ಮಹೇಶ ಹಾರೋಗೇರಿ, ವಿಕಾಸ ಮಹಾಜನಶೆಟ್ಟರ, ರಾಮಣ್ಣ ರಿತ್ತಿ, ಯಲ್ಲಪ್ಪ ಹಂಜಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

> ಸ್ವಾತಂತ್ರ್ಯಪೂರ್ವದಲ್ಲಿ ಜನರನ್ನು ಸಂಘಟಿಸುವ ಹಾಗೂ ಒಗ್ಗೂಡಿಸುವ ಉದ್ದೇಶದಿಂದ ಬಾಲಗಂಗಾಧರ ತಿಲಕರು ಸಾರ್ವಜನಿಕ ಗಣೇಶೋತ್ಸವಕ್ಕೆ ಚಾಲನೆ ನೀಡಿದ್ದರು. ನಮ್ಮ ಸಂಸ್ಕೃತಿ, ಸಂಪ್ರದಾಯಗಳ ಪ್ರತೀಕವಾಗಿರುವ ಗಣೇಶೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವುದರ ಜೊತೆಗೆ, ಬರಗಾಲದ ಸಂಕಷ್ಟದಿಂದ ರೈತರು ಸೇರಿದಂತೆ ಎಲ್ಲರೂ ಮುಕ್ತರಾಗಲಿ ಎಂದು ವಿಘ್ನಹರನಲ್ಲಿ ಪ್ರಾರ್ಥಿಸೋಣ.
>
> – ಆನಂದಸ್ವಾಮಿ ಗಡ್ಡದೇವರಮಠ, ಹಾವೇರಿ ಲೋಕಸಭಾ ಕ್ಷೇತ್ರದ ಯುವ ಮುಖಂಡ

## ನಾಡು-ನುಡಿಗೆ ಅಳಿಸಲಾಗದ ಕೊಡುಗೆ

# ಕನ್ನಡದ ಕಾವಲುಗಾರ ಶಿವಬಸವ ಶ್ರೀಗಳು



ವಿಜಯಸಾಕ್ಷಿ ಸುದ್ದಿ, ಗದಗ

ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ನಾಡು, ನುಡಿ ಹಾಗೂ ಕನ್ನಡ ಭಾಷೆಯ ಸೇವೆಗೆ ತಮ್ಮ ಬದುಕನ್ನೇ ಮುಡಿಪಾಗಿಟ್ಟ ಲಿಂಗೈಕ್ಯ ಡಾ. ಶಿವಬಸವ ಮಹಾಸ್ವಾಮಿಗಳು ಸದಾ ಸ್ಮರಣೀಯರು ಎಂದು ಪೂಜ್ಯ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ಹೇಳಿದರು. ಲಿಂಗಾಯತ ಪ್ರಗತಿಶೀಲ ಸಂಘದ 2815ನೇ ಶಿವಾನುಭವದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಬೆಳಗಾವಿಗೆ ಫಜಲ್ ಅಲಿ ಆಯೋಗ ಆಗಮಿಸಿದ ಸಂದರ್ಭದಲ್ಲಿ ಬೆಳಗಾವಿ ಕನ್ನಡಿಗರದ್ದು ಎಂದು ಪ್ರತಿಪಾದಿಸಿ, ಕರ್ನಾಟಕದಲ್ಲಿ ಬೆಳಗಾವಿ ಉಳಿಯುವಂತೆ ಮಾಡಿದ ಮಹನೀಯರಲ್ಲಿ ಡಾ. ಶಿವಬಸವ ಮಹಾಸ್ವಾಮಿಗಳ ಪಾತ್ರ ಮಹತ್ವದ್ದಾಗಿದೆ. ಕನ್ನಡಿಗರು ನೆಮ್ಮದಿಯಿಂದ ಅಲ್ಲಿ ಬದುಕಲು ಅನುಕೂಲವಾಗುವಂತಹ ವಾತಾವರಣ ನಿರ್ಮಿಸುವಲ್ಲಿ ನಾಗನೂರು ಶ್ರೀ ರುದ್ರಾಕ್ಷಿಮಠದ ಕೊಡುಗೆ ಸ್ಮರಣೀಯವಾಗಿದೆ ಎಂದರು.

1924ರಲ್ಲಿ ಮಹಾತ್ಮ ಗಾಂಧೀಜಿ ಬೆಳಗಾವಿಗೆ ಆಗಮಿಸಿದ ಸಂದರ್ಭದಲ್ಲಿ ಹರಡೇಕರ ಮಂಜಪ್ಪ ಸೇರಿದಂತೆ ಅನೇಕರೊಂದಿಗೆ ಕೈಜೋಡಿಸಿ ಕನ್ನಡ ನಾಡು-ನುಡಿಯ ಸೇವೆಗೆ ಡಾ. ಶಿವಬಸವ ಮಹಾಸ್ವಾಮಿಗಳು ನಡೆಸಿದ ಹೋರಾಟವೂ ಗಮನಾರ್ಹವಾಗಿದೆ.

ಬೆಳಗಾವಿ ಪರಿಸರದಲ್ಲಿ ಅನ್ನ, ಅಕ್ಷರ, ಅರಿವು ಎಂಬ ತ್ರಿವಿಧ ದಾಸೋಹದ ಮೂಲಕ ಕನ್ನಡದ ವಾತಾವರಣ ನಿರ್ಮಿಸುವಲ್ಲಿ ಅವರ ಕೊಡುಗೆ ಅಪೂರ್ವವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ನಾಡಿನ ಖ್ಯಾತ ಅಭಿಯಂತರ ಸರ್ ಎಂ. ವಿಶ್ವೇಶ್ವರಯ್ಯ ಅವರ ಸಾಧನೆಗಳನ್ನು ಸ್ಮರಿಸಿದ ಶ್ರೀಗಳು, ಕೃಷ್ಣರಾಜಸಾಗರ ಅಣೆಕಟ್ಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ಹಲವು ಮಹತ್ವದ ಕಾರ್ಯಗಳ ಮೂಲಕ ಅವರು ಇತಿಹಾಸದಲ್ಲಿ ಅಚ್ಚಳಿಯದ ಗುರುತು ಮೂಡಿಸಿದ್ದಾರೆ. ಮೈಸೂರು ಸಂಸ್ಥಾನದ ದಿವಾನರಾಗಿ ಅವರ ಆಡಳಿತಾತ್ಮಕ ಕೊಡುಗೆಯೂ ಗಮನಾರ್ಹವಾಗಿದೆ ಎಂದರು.

ಡಾ. ಬಸವರಾಜ ಪಾಟೀಲ ಅವರು 'ಕೃಷಿ ಎಂಜಿನಿಯರಿಂಗ್ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ರೈತರ ಸಬಲೀಕರಣ' ವಿಷಯ ಕು-ರಿತು ವಿಶೇಷ ಉಪನ್ಯಾಸ ನೀಡಿದರು. ಕಡಿಮೆ ನೀರು ಬಳಸಿ ಹೆಚ್ಚಿನ ಇಳುವರಿ ಪಡೆಯುವುದು ಇಂದಿನ ಕೃಷಿಯ ಅನಿವಾರ್ಯತೆಯಾಗಿದೆ.

ರಾಸಾಯನಿಕಗಳ ಬಳಕೆಯನ್ನು ಕಡಿಮೆ ಮಾಡಿ ಆಧುನಿಕ ತಂತ್ರಜ್ಞಾನವನ್ನು ಕೃಷಿಯಲ್ಲಿ ಪರಿಣಾಮಕಾರಿಯಾಗಿ ಬಳಸಬೇಕು. ಕಾಲಕಾಲಕ್ಕೆ ಮಣ್ಣಿನ ಪರೀಕ್ಷೆ ನಡೆಸಿ ಮಣ್ಣಿಗೆ ಅಗತ್ಯವಿರುವ ಜೀವಪೋಷಕಾಂಶಗಳ ಕುರಿತು ಅರಿವು ಹೊಂದಬೇಕು ಎಂದು ಸಲಹೆ ನೀಡಿದರು.

ಸರ್ ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನದ ಅಂಗವಾಗಿ ಜಗದ್ಗುರು ತೋಂಟದಾರ್ಯ ಎಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಕಾರ್ತಿಕ ಅಜ್ಜಂಪುರಶೆಟ್ರು, ನಾಗರಾಜ ಚಾಕಲಬ್ಬಿ, ಜಗದೀಶ ಶಿವನಗುತ್ತಿ, ಲೋಹಿತ ಜವಳಿ, ಮುಕ್ತಾ ಪಾಟೀಲ ಹಾಗೂ ಪ್ರೇಮ ಯೆಳ್ಳೂರು ಅವರನ್ನು ಪೂಜ್ಯರು ಗೌರವಿಸಿ ಸನ್ಮಾನಿಸಿದರು.

ವಚನ ಸಂಗೀತವನ್ನು ಮೃತ್ಯುಂ-ಜಯ ಹಿರೇಮಠ ಹಾಗೂ ಗುರುನಾಥ ಸುತಾರ ನೆರವೇರಿಸಿದರು. ಧರ್ಮಗ್ರಂಥ ಪಠಣವನ್ನು ಸೃಷ್ಟಿ ಹಬೀಬ, ವಚನ ಚಿಂತನವನ್ನು ಚಂದನಾ ದಂಡಿನ ನೆರವೇ-ರಿಸಿದರು.ಶ್ರೀಮತಿ ಶಾಂತಾದೇವಿ ಭೀಮಪ್ಪ ಕೊನ್ನಾವರ ಹಾಗೂ ಮಕ್ಕಳು ಮತ್ತು ಡಾ. ಮುರುಗೆಪ್ಪ ಎಂ. ಅವಟಿ ದಾಸೋಹ ಸೇವೆ ಸಲ್ಲಿಸಿದರು. ಲಿಂಗಾಯತ ಪ್ರಗತಿ ಶೀಲ ಸಂಘದ ಅಧ್ಯಕ್ಷ ಡಾ. ಉಮೇಶ ವಿ. ಪುರದ ಸ್ವಾಗತಿಸಿದರು. ಡಾ. ರಮೇಶ ಕಲ್ಲನಗೌಡರ ನಿರೂಪಿಸಿದರು. ಶಿವಾನುಭವದಲ್ಲಿ ಉಪಾಧ್ಯಕ್ಷ ಪ್ರಭು ಗಂಜಿಹಾಳ, ಸುರೇಖಾ ಪಿಳ್ಳಿ, ಕಾರ್ಯದರ್ಶಿ ಸಿದ್ಧರಾಮ ಪಟ್ಟೇದ, ಸಹಕಾರ್ಯದರ್ಶಿ ಪ್ರತಿಭಾ ಬಡ್ನಿ, ಕೋಶಾಧ್ಯಕ್ಷ ವೀರಣ್ಣ ಗೋಟಡಕಿ, ಕೆ.ಎಸ್. ಕೋರಿಮಠ, ಸೋಮಶೇಖರ ಪುರಾಣಿಮಠ, ಆದೇಶ ಅಂಗಡಿ ಸೇರಿದಂತೆ ಶ್ರೀಮಠದ ಸದ್ಭಕ್ತರು ಭಾಗವಹಿಸಿದ್ದರು.

> ಕನ್ನಡ ನೆಲ, ಜಲ ಹಾಗೂ ಭಾಷೆಯ ಉಳಿವಿಗಾಗಿ ಡಾ. ಶಿವಬಸವ ಮಹಾಸ್ವಾಮಿಗಳು ಸಲ್ಲಿಸಿದ ಸೇವೆ ಅಪೂರ್ವ. ಬೆಳಗಾವಿ ಪರಿಸರದಲ್ಲಿ ಅನ್ನ, ಅಕ್ಷರ, ಅರಿವು ಎಂಬ ತ್ರಿವಿಧ ದಾಸೋಹದ ಮೂಲಕ ಕನ್ನಡದ ವಾತಾವರಣ ಕಟ್ಟುವಲ್ಲಿ ಅವರು ವಹಿಸಿದ ಪಾತ್ರವನ್ನು ನಾಡು ಎಂದಿಗೂ ಮರೆಯಲು ಸಾಧ್ಯವಿಲ್ಲ.
>
> – ಶ್ರೀ ಶಾಂತಲಿಂಗ ಮಹಾಸ್ವಾಮಿಗಳುಹಿ

## ಕ್ರೀಡೆಯಿಂದ ಗಟ್ಟಿಯಾಗಲಿ ದೇಹ-ಮನಸ್ಸು: ನೇಮಿರಾಜ ನಾಯ್ಕ

# ಆಟದ ಅಂಗಳದಲ್ಲೂ ಮಿಂಚಲಿ ವಿದ್ಯಾರ್ಥಿಗಳು



ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಯೂ ಅಗತ್ಯ. ಪಾಠದೊಂದಿಗೆ ಆಟಗಳಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯ ವೃದ್ಧಿಯಾಗುತ್ತದೆ ಎಂದು ಶಾಸಕ ಕೆ. ನೇಮಿರಾಜ ನಾಯ್ಕ ಹೇಳಿದರು.

ಪಟ್ಟಣದ ಗಂಗಾವತಿ ಭೀಮಪ್ಪನವರ ಪದವಿಪೂರ್ವ ಕಾಲೇಜು ಆವರಣದ ತಾಲೂಕು ಕ್ರೀಡಾಂಗಣದಲ್ಲಿ 2026-27ನೇ ಸಾಲಿನ ತಾಲೂಕು ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು. ತಾಲೂಕಿನಲ್ಲಿ ದೈಹಿಕ ಶಿಕ್ಷಕರ ಕೊರತೆ ಇರುವುದನ್ನು ಸರ್ಕಾರದ ಗಮನಕ್ಕೆ ತಂದು, ಮುಂಬರುವ ಅಧಿವೇಶ ನದಲ್ಲಿ ಈ ಕುರಿತು ಚರ್ಚಿಸಿ ಕ್ಷೇತ್ರಕ್ಕೆ ಅಗತ್ಯವಿರುವ ದೈಹಿಕ ಶಿಕ್ಷಕರನ್ನು ನೇಮಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಮಕ್ಕಳು ಯಾವುದೇ ಪರಿಸ್ಥಿತಿಗೂ ಜಗ್ಗದೆ ಮಾನಸಿಕವಾಗಿ ಸದೃಢರಾಗಬೇಕು. ಬಿಸಿಲು ಸೇರಿದಂತೆ ಯಾವುದೇ ಸವಾಲು ಗಳನ್ನು ಎದುರಿಸುವ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ಪಿ.ಎಂ. ಮಂಜುನಾಥ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ರವಿಚಂದ್ರ ನಾಯ್ಕ್, ಶಿಕ್ಷಕರಾದ ಎಲ್. ಮೀಟ್ಯಾ ನಾಯ್ಕ್, ಟಿ.ಜಿ. ಬಸವರಾಜ್, ಟಿ. ಸೋಮಶೇಖರ, ಬಿ. ಚಂದ್ರಪ್ಪ, ಮೋಹನ್ ಅಣಜಿ, ರಾಜಶೇಖರ, ಶಾಂತಮೂರ್ತಿ, ಎಸ್.ಎಂ. ಯಂಕಾರೆಡ್ಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶಾರದಾ ಮಂಜುನಾಥ್ ಸೋಮನಾಥ್ ಹಾಗೂ ಸಂಗಡಿಗರು ಪ್ರಾರ್ಥನೆ ನೆರವೇರಿಸಿದರು. ತಾಲೂಕು ವ್ಯಾಪ್ತಿಯ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು.

### ಕಾನೂನು ಪದವೀಧರರಿಗೆ ಶಿಷ್ಯವೇತನ

ವಿಜಯಸಾಕ್ಷಿ ಸುದ್ದಿ, ಗದಗ

2026-27ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕಾನೂನು ಪದವೀಧರರಿಗೆ ವೃತ್ತಿ ತರಬೇತಿ ಅವಧಿಯಲ್ಲಿ ಶಿಷ್ಯವೇತನ ನೀಡುವ ಯೋಜನೆಯಡಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಎಸ್‌ಸಿ ಅಥವಾ ಎಸ್‌ಟಿ ವರ್ಗಕ್ಕೆ ಸೇರಿದವರಾಗಿರಬೇಕು. ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಎರಡು ವರ್ಷದೊಳಗೆ ಕಾನೂನು ಪದವಿ ಪಡೆದಿರಬೇಕು.

## ಬೆಟಗೇರಿಯಲ್ಲಿ ವಿಶ್ವಕರ್ಮ ಮಹೋತ್ಸವಕ್ಕೆ ಕಳೆ

# ಶ್ರಮ ಸಂಸ್ಕೃತಿಯ ಶಿಲ್ಪಿಗಳೇ ವಿಶ್ವಕರ್ಮರು



ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ದೇವಾಲಯ, ಅರಮನೆ, ಸ್ಮಾರಕಗಳಿಂದ ಹಿಡಿದು ದೇವರ ಮೂರ್ತಿಗಳು ಹಾಗೂ ವಾಹನಗಳವರೆಗೆ ತಮ್ಮ ಕೌಶಲ್ಯ ಮತ್ತು ಕಲಾಪ್ರೌಢಿಮೆಯಿಂದ ರೂಪಿಸಿದ ಶ್ರಮಜೀವಿಗಳ ಕೊಡುಗೆ ನಾಡಿನ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿದೆ. ಇಂತಹ ಶ್ರಮ ಸಂಸ್ಕೃತಿಯ ವಾರಸುದಾರರೇ ವಿಶ್ವಕರ್ಮರು ಎಂದು ಗದಗ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನಿರ್ದೇಶಕ (ಅಭಿವೃದ್ಧಿ) ಕೆ.ಡಿ. ಬಡಿಗೇರ ಹೇಳಿದರು.

ಬೆಟಗೇರಿ ಕಾಳಿಕಾದೇವಿ ದೇವಸ್ಥಾನದಲ್ಲಿ ವಿಶ್ವಕರ್ಮ ಸಮಾಜ, ಕಾಳಿಕಾದೇವಿ ದೇವಸ್ಥಾನ ಟ್ರಸ್ಟ್ ಕಮಿಟಿ, ಶರನ್ನವರಾತ್ರಿ ಉತ್ಸವ ಸಮಿತಿ ಹಾಗೂ ವಿಶ್ವಕರ್ಮ ಗಾಯತ್ರಿ ಮಹಿಳಾ ಮಂಡಳದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವಕರ್ಮ ಮಹೋತ್ಸವ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಎನ್.ಐ. ಪತ್ತಾರ ಹಾಗೂ ಘನ ಉಪಸ್ಥಿತಿ ವಹಿಸಿದ್ದ ಟ್ರಸ್ಟ್ ಅಧ್ಯಕ್ಷ ಶ್ರೀಧರ ಕೊಣ್ಣೂರ ಮಾತನಾಡಿ, ವಿಶ್ವಕರ್ಮ ಮಹೋತ್ಸವ ಹಾಗೂ ಶಿಕ್ಷಕರ ದಿನಾಚರಣೆಯನ್ನು ಎಲ್ಲರೂ ಒಗ್ಗೂಡಿ ಅರ್ಥಪೂರ್ಣವಾಗಿ ಆಚರಿಸಿರುವುದು ಸಂತಸ ತಂದಿದೆ ಎಂದರು. ದೇವಸ್ಥಾನದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಕ್ಕೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು.

ಅತಿಥಿಗಳಾಗಿ ಗದಗ ಡಯಟ್ ಉಪನ್ಯಾಸಕ ಜಿ.ಡಿ. ದಾಸರ ಹಾಗೂ ಗದಗ ಗ್ರಾಮೀಣ ವಲಯದ ಬಿಇಒ ಕಚೇರಿಯ ಶಿಕ್ಷಣ ಸಂಯೋಜಕ ಬಿ.ವೈ. ಡೊಳ್ಳಿನ ಮಾತನಾಡಿ, ನಾಡಿನ ಕಲೆ, ಸಂಸ್ಕೃತಿ ಹಾಗೂ ಬದುಕಿನ ಅಗತ್ಯತೆಗಳನ್ನು ರೂಪಿಸುವಲ್ಲಿ ವಿಶ್ವಕರ್ಮರ ಕರಕುಶಲತೆ ಮತ್ತು ಕೊಡುಗೆ ಅಪಾರವಾಗಿದೆ. ಬೆಟಗೇರಿ ಕಾಳಿಕಾ ದೇವಸ್ಥಾನದಲ್ಲಿ ನಿರಂತರವಾಗಿ ನಡೆಯುತ್ತಿರುವ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳು ಸಮಾಜಮುಖಿ ಹಾಗೂ ಸರ್ವಧರ್ಮ ಸಮನ್ವಯದ ವೇದಿಕೆಯಾಗಿ ರೂಪುಗೊಂಡಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸೃಷ್ಟಿಕರ್ತ ಹಾಗೂ ದೇವಶಿಲ್ಪಿ ಭಗವಾನ್ ವಿಶ್ವಕರ್ಮರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ವಿಶ್ವಕರ್ಮ ಮಹೋತ್ಸವ ಆಚರಿಸಲಾಯಿತು. ಶಿಕ್ಷಕರ ದಿನಾಚರಣೆ ಅಂಗವಾಗಿ ನಿವೃತ್ತ ಶಿಕ್ಷಕಿ ಹಾಗೂ ಗದಗ ವಿಶ್ವಕರ್ಮ ಮಹಿಳಾ ಪತ್ತಿನ ಸಂಘದ ಅಧ್ಯಕ್ಷೆ ರಿಂದಮ್ಮ ತೋಟಗಂಟಿ ಮತ್ತು ಗದಗ ಜಿಲ್ಲಾ ವಿಶ್ವಕರ್ಮ ನೌಕರರ ಸಂಘದ ಸಂಸ್ಥಾಪಕ ಸದಸ್ಯ ಆನಂದ ಕಮ್ಮಾರ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲ ಶಿಕ್ಷಕ-ರಿಗೆ ಗುರುವಂದನೆ ಸಲ್ಲಿಸಲಾಯಿತು.

ಟ್ರಸ್ಟ್ ಉಪಾಧ್ಯಕ್ಷ ಅಶೋಕ ಸುತಾರ, ಕೋಶಾಧ್ಯಕ್ಷ ವಿಜಯಕುಮಾರ ಬೆಂತೂರ, ನಿರ್ದೇಶಕರಾದ ಗೋಪಾಲ ಬಡಿಗೇರ, ಮಹೇಶ ಬಡಿಗೇರ, ನಾಗಲಿಂಗಪ್ಪ ಬೆಂತೂರ, ಶ್ರೀಕಾಂತ ಬಡಿಗೇರ, ವಿಜಯಕುಮಾರ ಸೋನಾರ, ಶ್ರೀ ಕಾಳಿಕಾ ಸೇವಾಭೂಷಣ ಪ್ರಶಸ್ತಿ ಪುರಸ್ಕೃತ ವಿರುಪಾಕ್ಷಪ್ಪ ಪೋತದಾರ, ಗದಗ ಜಿಲ್ಲಾ ವಿಶ್ವಕರ್ಮ ಮಹಿಳಾ ಸಂಘದ ಸಂಸ್ಥಾಪಕ ಅಧ್ಯಕ್ಷೆ ಶಿವಲೀಲಾ ಕೆ. ಬಡಿಗೇರ ಸೇ-ರಿದಂತೆ ಹಲವರು ಉಪಸ್ಥಿತರಿದ್ದರು.

ಮಹಿಳಾ ಮಂಡಳದ ಉಪಾಧ್ಯಕ್ಷೆ ಸರೋಜ ಬೆಂತೂರ ಪ್ರಾರ್ಥಿಸಿದರು. ವಿದ್ಯಾರ್ಥಿನಿಯರಾದ ಸಾಕ್ಷಿ ಮತ್ತು ಸೃಷ್ಟಿ ನೃತ್ಯದ ಮೂಲಕ ಸ್ವಾಗತಿಸಿದರು. ದೇವಸ್ಥಾನದ ಸಾಂಸ್ಕೃತಿಕ ಸಂಚಾಲಕ ವಿಶ್ವನಾಥ ಕವಮ್ಮಾರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದೇವಸ್ಥಾನದಲ್ಲಿ ನಿರಂತರವಾಗಿ ನಡೆಯುತ್ತಿರುವ ಧಾರ್ಮಿಕ, ಸಾಮಾಜಿ-ಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದ ಅವರು, ಮುಂದಿನ ದಿನಗಳಲ್ಲಿ ರೈತರು, ಕಾರ್ಮಿಕರು, ವೈದ್ಯರು, ಸೈನಿಕರ ಮಕ್ಕಳು ಹಾಗೂ ಪೊಲೀಸ್ ದಿನಾಚರಣೆಯಂತಹ ಕಾರ್ಯಕ್ರಮಗಳನ್ನು ಆಯೋಜಿಸುವ ಚಿಂತನೆ ಇದೆ ಎಂದು ತಿಳಿಸಿದರು.

ಕನ್ನಡ ಉಪನ್ಯಾಸಕ ಹಾಗೂ ಸಾಂಸ್ಕೃತಿಕ ಸಂಚಾಲಕ ಮಂಜುನಾಥ ಅಕ್ಕಸಾಲಿ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕ ಸತೀಶ ಹೊರಪೇಟ ವಂದಿಸಿದರು. ಅಶೋಕ ಸುತಾರ ಹಾಗೂ ಪ್ರಕಾಶ ಬಡಿಗೇರ ಅವರ ಮಂಗಳಾರತಿಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

> ಜಗತ್ತು ಇಷ್ಟೊಂದು ಸುಂದರವಾಗಿ ರೂಪುಗೊಳ್ಳುವಲ್ಲಿ ಶ್ರಮ ಸಂಸ್ಕೃತಿಯ ಕೊಡುಗೆ ಅಪಾರ. ದೇವಾಲಯಗಳು, ನಗರಗಳು, ಅರಮನೆಗಳು, ಸ್ಮಾರಕಗಳು ಹಾಗೂ ದೇವರ ಮೂರ್ತಿಗಳನ್ನು ತಮ್ಮ ಅಪೂರ್ವ ಕಲೆಯಿಂದ ನಿರ್ಮಿಸಿದ ವಿಶ್ವಕರ್ಮರ ಸೇವೆ ಸಮಾಜಕ್ಕೆ ಸದಾ ಸ್ಫೂರ್ತಿದಾಯಕ. ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಗಳು ಯಶಸ್ವಿಯಾಗಬೇಕಾದರೆ ಪ್ರತಿಯೊಬ್ಬರೂ ತನು-ಮನ-ಧನದಿಂದ ಸೇವೆ ಸಲ್ಲಿಸಬೇಕು. ದಾನ-ಧರ್ಮದ ಮೂಲಕ ಬದುಕನ್ನು ಸಾರ್ಥ-'ಕಗೊಳಿಸಬಹುದು.
>
> – ಕೆ.ಡಿ. ಬಡಿಗೇರ


ಕರ್ನಾಟಕ ಸರ್ಕಾರ

**ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ, ಗದಗ-582101**

ಜಿಲ್ಲಾ: ಗದಗ ರಾಜ್ಯ: ಕರ್ನಾಟಕ

ದೂ: 08372-278504 ಇ-ಮೇಲ್: ka.gadag.betageri.cmc@gmail.com

ನಂ.ಗಬೆನಸ/ತಾಂ.ವಿ/ವಹಿ/ ಟೆಂಡರ್/2026-27 ದಿನಾಂಕ: 18-09-2026

**ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ **1999-2000** ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಗದಗ-ಬೆಟಗೇರಿ ನಗರಸಭೆಯ ಸನ್ **2026-27 ನೇ** ಸಾಲಿನ ನಗರಸಭೆ ಅನುದಾನ **ಒಟ್ಟು 04** ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ **ರೂ.26.93 ಲಕ್ಷಗಳಿಗೆ** ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, 1)**DMA/2026-27/OW/WORK_INDENT-5977** 2)**DMA/2026-27/OW/WORK_INDENT-48770** 3)**DMA/2026-27/OW/WORK_INDENT-61305** 4)**DMA/2026-27/OW/WORK_INDENT-51478** ಕೊಳವೆ ಭಾವಿ ಕೊರೆದು ಪವರ್ ಪಂಪ್ ಅಳವಡಿಸುವುದು .http://kppp.karnataka.gv.in ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ನಿಗದಿ ಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

| | |
|---|---|
| ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ | 05-10-2026 Up to 16.00 Hours |
| ತಾಂತ್ರಿಕ ಬಿಡ್ಡುಗಳನ್ನ ತೆರೆಯುವ ದಿನಾಂಕ ಮತ್ತು ಸಮಯ (Technical Bid) | 06-10-2026 Up to 16.30 Hours |

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-
ಪೌರಾಯುಕ್ತರು
ನಗರಸಭೆ ಗದಗ ಬೆಟಗೇರಿ

ವಾ.ಸಾ.ಸಂ.ಇ/ಗದಗ/256/ದೇಶಪಾಂಡೆಪಬ್ಲಿಸಿಟಿ/2026-27


## ಡಾ. ವೆಂಕಟೇಶಕುಮಾರ ಅವರಿಗೆ ಮಹಾಂತಶ್ರೀ ಪ್ರಶಸ್ತಿ ಪ್ರದಾನ ಇಂದು




ವಿಜಯಸಾಕ್ಷಿ ಸುದ್ದಿ, ಮುಳಗುಂದ

ಖ್ಯಾತ ಹಿಂದೂಸ್ತಾನಿ ಗಾಯಕ, ಪದ್ಮಶ್ರೀ ಪಂಡಿತ ಡಾ. ಎಂ. ವೆಂಕಟೇಶಕುಮಾರ ಅವರಿಗೆ ಚವಡಿ ಪ್ರತಿಷ್ಠಾನ (ರಿ.) ಮುಳಗುಂದ ವತಿಯಿಂದ ಮೊದಲ ಬಾರಿಗೆ ಮಹಾಂತಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ.

ಸೆ.20ರಂದು ಭಾನುವಾರ ಬೆಳಗ್ಗೆ 10 ಗಂಟೆಗೆ ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿ ಕಲಾಭವನದಲ್ಲಿ ಪ್ರಶಸ್ತಿ ಪ್ರದಾನ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ. ಡಾ. ಎಸ್.ಸಿ. ಚವಡಿ ಅವರ ಕುಟುಂಬದವರು ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ.

ಧಾರವಾಡದ ಮುರುಘಾಮಠದ ಮಲ್ಲಿಕಾರ್ಜುನ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗದೇವರು ಸಮುಖ ವಹಿಸುವರು. ಪದ್ಮವಿಭೂಷಣ ಪಂಡಿತ ಡಾ. ಮಲ್ಲಿಕಾರ್ಜುನ ಮನ್ಸೂರ್ ಅವರ ಕುರಿತು ಡಾ. ಮೃತ್ಯುಂಜಯ ಶೆಟ್ಟರ ದತ್ತಿ ಉಪನ್ಯಾಸ ನೀಡಲಿದ್ದಾರೆ.

ಡಾ. ಶಿವಕುಮಾರ ಚವಡಿ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಸಚಿವ ಎಚ್.ಕೆ. ಪಾಟೀಲ, ಡಾ. ಆನಂದ ಪಾಂಡುರಂಗಿ, ಎಂ.ಡಿ. ಬಟ್ಟೂರ, ಎಸ್.ಎಂ. ನೀಲಗುಂದ ಹಾಗೂ ಅಕ್ಕಮಹಾದೇವಿ ಆಲೂರ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಡಾ. ಎಸ್.ಸಿ. ಚವಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಎಂ.ಡಿ. ಬಟ್ಟೂರ, ಕೆ.ಎಲ್. ಕರಿಗೌಡ್ರ, ನಾಗರಾಜ ನೀಲಗುಂದ, ಬಿ.ವಿ. ಸುಂಕಾಪೂರ, ಸಂಜಯ ನೀಲಗುಂದ, ಶಿವಬಸವ ಹಸಬಿ, ಮಂಜುನಾಥ ಮಟ್ಟಿ ಹಾಗೂ ರಾಜೇಶ್ವರಿ ಬಡ್ನಿ ಉಪಸ್ಥಿತರಿದ್ದರು.

## ಸಣ್ಣ ಸುದ್ದಿಗಳು

### ಪೋಷಣಾ ಮಾಸಾಚರಣೆಯಲ್ಲಿ ಗರ್ಭಿಣಿಯರಿಗೆ ಉಡಿ ತುಂಬಿ ಜಾಗೃತಿ ಪೋಷಣೆಯೇ ಮಕ್ಕಳ ಭವಿಷ್ಯದ ಬಲ



**ವಿಜಯಸಾಕ್ಷಿ ಸುದ್ದಿ, ಗದಗ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ ಪೋಷಣಾ ಮಾಸಾಚರಣೆ ಅಭಿಯಾನ ಕಾರ್ಯಕ್ರಮದಲ್ಲಿ ಪೌಷ್ಠಿಕ ಆಹಾರ, ತಾಯಿ-ಮಗು ಆರೋಗ್ಯ ಹಾಗೂ ಅಂಗನವಾಡಿ ಸೇವೆಗಳ ಕುರಿತು ವ್ಯಾಪಕ ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ರಾಧಾ ಮಣ್ಣೂರ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ, ಅಂಗನವಾಡಿ ಕಾರ್ಯಕರ್ತೆಯರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಮಾರ್ಗದರ್ಶನ ನೀಡಿದರು.

ಪ್ರಾಸ್ತಾವಿಕವಾಗಿ ಎ.ಎಸ್.ಡಿ.ಪಿ. ರೇಣುಕಾ ಮಾಗಡಿ ಮಾತನಾಡಿದರು. ಎ.ಎಸ್.ಡಿ.ಪಿ. ಮಂಜುಳಾ ಕಮತ ಪೌಷ್ಠಿಕಾಂಶದ ಮಹತ್ವ ಹಾಗೂ ಸಮಗ್ರ ಪೋಷಣೆಯ ಕುರಿತು ಮಾಹಿತಿ ನೀಡಿದರು. ಅತಿಥಿಯಾಗಿ ಪಾಲ್ಗೊಂಡ ಆರ್.ಎಲ್. ಮೇಳೆನವರ, ಅಂಗನವಾಡಿಗಳಲ್ಲಿ ಸರ್ಕಾರದಿಂದ ನೀಡಲಾಗುವ ಪೌಷ್ಠಿಕ ಆಹಾರವನ್ನು ತಾಯಂದಿರು ಹಾಗೂ ಗರ್ಭಿಣಿಯರು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ನಗರಸಭೆ ಸದಸ್ಯೆ ಶಕುಂತಲಾ ಅಕ್ಕಿ ಅಧ್ಯಕ್ಷತೆ ವಹಿಸಿದ್ದರು. ಸಾಮಾಜಿಕ ಕಾರ್ಯಕರ್ತರಾದ ಹೊಳೆ ಬಸಪ್ಪ ಅಕ್ಕಿ ಹಾಗೂ ಬೂದಪ್ಪ ಹುಣಸಿಮರದ ಮಾತನಾಡಿದರು. ಪೋಷಣಾ ಸಂಯೋಜಕರಾದ ಪವನ ಕಟಿಗಾರ, ಕಾವೇರಿ ಜೋಗಿನ ಹಾಗೂ ರೇಣುಕಾ ಪೂಜಾರ ವೇದಿಕೆಯಲ್ಲಿದ್ದರು. ಕಾರ್ಯಕ್ರಮದಲ್ಲಿ ಅಂಗನವಾಡಿಯಲ್ಲಿ ನೀಡಲಾಗುವ ವಿವಿಧ ಪೌಷ್ಠಿಕ ಆಹಾರಗಳ ಪ್ರಾತ್ಯಕ್ಷಿಕೆ ಹಾಗೂ ಪ್ರದರ್ಶನ ಏರ್ಪಡಿಸಲಾಗಿತ್ತು. ಗರ್ಭಿಣಿಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಮಕ್ಕಳಿಗೆ ಹಾಲುಣಿಸುವ ಕಾರ್ಯಕ್ರಮವೂ ನಡೆಯಿತು. ತುಳಸಾ ದೇಶಪಾಂಡೆ ಪ್ರಾರ್ಥಿಸಿದರು. ವಿಜಯಲಕ್ಷ್ಮೀ ಗುರುಬಸನಗೌಡ್ರ ಸ್ವಾಗತಿಸಿ ನಿರೂಪಿಸಿದರು. ಮೇಲ್ವಿಚಾರಕಿ ಸುಜಾತಾ ಹಾವನೂರು ವಂದಿಸಿದರು. ಅಂಗನವಾಡಿ ಕಾರ್ಯಕರ್ತೆಯರಾದ ದೇವಮ್ಮ ಕಮ್ಮಾರ್, ತಾಜಬಿ ಹೊಸೂರ, ಮಂಜುಳಾ ದಾವಣಗೆರೆ, ಲೋಕವ್ವ ನರಸಪ್ಪನವರ್, ಮಾಲಾ ಪೆನಗೊಂಡ್ಲ, ರಾಜೇಶ್ವರಿ ಹಡಪದ, ಈರಮ್ಮ ಅಂಗಡಿ, ಸುಮಂಗಲ ಜಗ್ಗಲ್, ಸಾವಿತ್ರಿ ಬಗನಾಳ, ಸುನಿತಾ ಸಿಂಧೆ ಸೇರಿದಂತೆ ಕಾರ್ಯಕರ್ತೆಯರು, ತಾಯಂದಿರು, ಗರ್ಭಿಣಿಯರು ಹಾಗೂ ಮಕ್ಕಳು ಪಾಲ್ಗೊಂಡಿದ್ದರು.

> ಪೋಷಣಾ ಮಾಸಾಚರಣೆಯ ಮೂಲಕ ತಾಯಿ, ಮಗು ಹಾಗೂ ಗರ್ಭಿಣಿಯರಲ್ಲಿ ಪೌಷ್ಠಿಕತೆಯ ಕುರಿತು ಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ.
>
> – ಶಕುಂತಲಾ ಅಕ್ಕಿ, ನಗರಸಭೆ ಸದಸ್ಯರು

### ಡೊಳ್ಳಿನ ನಾದದಲ್ಲಿ ಗಣೇಶನಿಗೆ ಸಾಂಪ್ರದಾಯಿಕ ಬೀಳ್ಕೊಡುಗೆ



**ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ನರೇಗಲ್ಲ ಪೊಲೀಸ್ ಠಾಣೆಯಲ್ಲಿ ಪ್ರತಿಷ್ಠಾಪಿಸಲಾಗಿದ್ದ ಗಣೇಶನ ಮೂರ್ತಿಗೆ ಶುಕ್ರವಾರ ಸಾಂಪ್ರದಾಯಿಕ ವಿಧಿವಿಧಾನಗಳೊಂದಿಗೆ ಭಕ್ತಿಭಾವದ ಬೀಳ್ಕೊಡುಗೆ ನೀಡಲಾಯಿತು.

ಪೊಲೀಸ್ ಠಾಣೆಯಿಂದ ಗಣೇಶನ ಮೂರ್ತಿ ಹೊರಬರುತ್ತಿದ್ದಂತೆ ಮುಂದೆ ಡೊಳ್ಳಿನ ತಂಡ, ಹಿಂದೆ ಭಕ್ತರ ದಂಡು ಸಾಗಿತು. 'ಗಣಪತಿ ಬಪ್ಪಾ ಮೋರಯಾ' ಘೋಷಣೆಗಳ ನಡುವೆ ಯುವಕರು ಡೊಳ್ಳಿನ ತಾಳಕ್ಕೆ ಹೆಜ್ಜೆ ಹಾಕಿದರು. ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಸಾರ್ವಜನಿಕರು ಗಣೇಶನ ದರ್ಶನ ಪಡೆದು ಕೈಮುಗಿದರು.

ಹಿರೇಮಠ ಶಾಲೆ, ಪಟ್ಟಣ ಪಂಚಾಯಿತಿ ಹಾಗೂ ದುರ್ಗಾ ಸರ್ಕಲ್ ಮಾರ್ಗವಾಗಿ ಸಾಗಿದ ಮೆರವಣಿಗೆ ಬಳಿಕ ಪಟ್ಟಣ ಪಂಚಾಯಿತಿ ಕಚೇರಿಯ ಹಿಂಭಾಗದ ಕೆರೆಯಲ್ಲಿ ಗಣೇಶ ಮೂರ್ತಿಯನ್ನು ಭಕ್ತಿಭಾವದಿಂದ ವಿಸರ್ಜಿಸಲಾಯಿತು.

ಡಿಜೆ ಅಬ್ಬರದ ನಡುವೆ ಪೊಲೀಸ್ ಠಾಣೆಯ ಗಣೇಶನ ವಿಸರ್ಜನೆಗೆ ಸಾಂಪ್ರದಾಯಿಕ ಡೊಳ್ಳು ತಂಡಕ್ಕೆ ಆದ್ಯತೆ ನೀಡಿದ್ದು ವಿಶೇಷ ಗಮನ ಸೆಳೆಯಿತು.

### ಮರಣದ ಬಳಿಕವೂ ಬೆಳಕು ನೀಡಿದ ಪ್ರಲ್ಹಾದ ಕುಷ್ಟಗಿ



**ವಿಜಯಸಾಕ್ಷಿ ಸುದ್ದಿ, ಗದಗ**

ಮನುಷ್ಯನ ಬದುಕು ಮುಗಿದರೂ, ಆತನ ಕಣ್ಣುಗಳು ಮತ್ತೊಬ್ಬರ ಬದುಕಿನಲ್ಲಿ ಬೆಳಕಾಗಬಹುದು ಎಂಬ ಮಾನವೀಯ ಸಂದೇಶವನ್ನು ಗದಗದಲ್ಲಿ ಪ್ರಲ್ಹಾದ ಕೆ. ಕುಷ್ಟಗಿ ಅವರ ಕುಟುಂಬ ಸಾರಿದೆ.

ಕರಿಯಮ್ಮನ ಕಲ್ಲು ಬಡಾವಣೆಯ ನಿವಾಸಿ ಪ್ರಲ್ಹಾದ ಕೆ. ಕುಷ್ಟಗಿ (74) ಶುಕ್ರವಾರ ಮುಂಜಾನೆ ನಿಧನರಾದರು. ಕುಟುಂಬದ ಸಮ್ಮತಿಯ ಮೇರೆಗೆ ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಪದಾಧಿಕಾರಿಗಳ ಸಹಕಾರದಲ್ಲಿ ಅವರ ನೇತ್ರಗಳನ್ನು ದಾನ ಮಾಡಲಾಯಿತು. ಹುಬ್ಬಳ್ಳಿಯ ಎಂ.ಎಂ. ಜೋಷಿ ನೇತ್ರಾಲಯದ ತಜ್ಞರ ತಂಡ ನೇತ್ರದಾನ ಪ್ರಕ್ರಿಯೆ ನೆರವೇರಿಸಿತು. ಮೃತರಿಗೆ ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಶನಿವಾರ ಮುಂಜಾನೆ ನಡೆಯಿತು.

ಈ ಸಂದರ್ಭದಲ್ಲಿ ಕುಟುಂಬದ ಸದಸ್ಯರು, ಲಯನ್ಸ್ ಕ್ಲಬ್ ಅಧ್ಯಕ್ಷ ಪ್ರವೀಣ ವಾರಕರ, ಕಾರ್ಯದರ್ಶಿ ಲಿಂಗರಾಜ ತೋಟದ, ಖಜಾಂಚಿ ರೇಣುಕಪ್ರಸಾದ ಶಿಗ್ಲಿಮಠ, ಮನೋಹರ ಕುಷ್ಟಗಿ, ಪ್ರಕಾಶ ರಾಯ್ಕರ್, ಅಶ್ವಿನಿ ಹೊನ್ನಾಲ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಗಣಪತಿಗೆ ವಿದಾಯ; ಜೋಕುಮಾರನಿಗೆ ಸ್ವಾಗತ

# ಮಳೆಗಾಗಿ ಮೊಳಗಿತು ಜೋಕುಮಾರನ ಮೊರೆ

**ವಿಜಯಸಾಕ್ಷಿ ಸುದ್ದಿ, ಜಕ್ಕಲಿ**

ಗಣಪತಿ ಹಬ್ಬದ ಸಂಭ್ರಮಕ್ಕೆ ತೆರೆ ಬೀಳುತ್ತಿದ್ದಂತೆ ಉತ್ತರ ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಮಣ್ಣಿನ ಬದುಕಿಗೆ ಬೆಸೆದುಕೊಂಡಿರುವ ಮತ್ತೊಂದು ವಿಶಿಷ್ಟ ಜಾನಪದ ಪರಂಪರೆ ಜೀವ ಪಡೆಯುತ್ತಿದೆ. ಗಣಪತಿಗೆ ಭಕ್ತಿಯಿಂದ ವಿದಾಯ ಹೇಳಿದ ಬೆನ್ನಲ್ಲೇ ಹಳ್ಳಿಗಳ ಓಣಿಗಳಲ್ಲಿ ಜೋಕುಮಾರನ ಆಗಮನಕ್ಕೆ ಸಿದ್ಧತೆ ಆರಂಭವಾಗಿದ್ದು, ಮಳೆ-ಬೆಳೆ ಸಮೃದ್ಧಿಯ ಆಶಯದೊಂದಿಗೆ ಗ್ರಾಮೀಣರು ಸಂಪ್ರದಾಯ ಆಚರಿಸುತ್ತಿದ್ದಾರೆ.

ಬಿದಿರಿನ ಬುಟ್ಟಿಯಲ್ಲಿ ಜೋಕುಮಾರನನ್ನು ಪ್ರತಿಷ್ಠಾಪಿಸಿ, ಬೇವಿನ ಸೊಪ್ಪು ಹಾಗೂ ಹಸಿರೆಲೆಗಳಿಂದ ಸಿಂಗರಿಸಿ, ಹೂವು-ನೈವೇದ್ಯ ಅರ್ಪಿಸಿ ಮನೆ-ಮನೆಯಲ್ಲೂ ಪೂಜೆ ಸಲ್ಲಿಸಲಾಗುತ್ತಿದೆ. ಆಡಂಬರವಿಲ್ಲದ ಈ ಆಚರಣೆಯಲ್ಲಿ ಉತ್ತರ ಕರ್ನಾಟಕದ ಮಣ್ಣಿನ ಸಂಸ್ಕೃತಿ, ಕೃಷಿ ಬದುಕು ಹಾಗೂ ತಲೆಮಾರುಗಳಿಂದ ಬಂದ ಜನಪದ ನಂಬಿಕೆಗಳು ಜೀವಂತವಾಗಿವೆ.



ಜೋಕುಮಾರನ ಆಗಮನದ ಸಂದರ್ಭದಲ್ಲಿ ಹಿರಿಯರ ಬಾಯಲ್ಲಿ ಮೊಳಗುವ ಜನಪದ ಸಾಲುಗಳು ಗ್ರಾಮೀಣ ಬದುಕಿನ ಆಶಯವನ್ನೇ ಸಾರುತ್ತವೆ.

"ಅಡ್ಡಡ್ಡ ಮಳೆ ಬಂದಾ... ದೊಡ್ಡದೊಡ್ಡ ಕೆರೆ ತುಂಬಿ... ಗೊಡ್ಡುಗೂಳೆಲ್ಲ ಹೈನಾದೇ ಜೋಕುಮಾರ..."

ಮಳೆ ರೈತನ ಬದುಕಿನ ಜೀವನಾಡಿ. ಮಳೆ ಬಂದರೆ ಕೆರೆ-ಕಟ್ಟೆಗಳು ತುಂಬಬೇಕು, ಹೊಲಗಳು ಹಸಿರಾಗಬೇಕು, ಬಿತ್ತಿದ ಬೀಜ ಮೊಳಕೆಯೊಡೆಯಬೇಕು. ಕೆರೆಗಳು ತುಂಬಿದರೆ ಕೃಷಿಗೆ ನೀರಿನ ಆಸರೆಯ ಜೊತೆಗೆ ಜಾನುವಾರುಗಳಿಗೂ ನೀರು-ಮೇವು ದೊರೆಯುತ್ತದೆ. ಹೀಗಾಗಿ ಜೋಕುಮಾರನ ಜನಪದ ಗೀತೆಗಳಲ್ಲಿ ಮಳೆ, ನೀರು, ಬೆಳೆ ಹಾಗೂ ಪಶುಸಂಪತ್ತಿನ ಸಮೃದ್ಧಿಯ ಹಾರೈಕೆ ಅಡಕವಾಗಿದೆ.

ಹಿಂದಿನ ತಲೆಮಾರಿನ ಕೃಷಿಕ ಕುಟುಂಬಗಳ ಬದುಕಿನಲ್ಲಿ ದನ-ಕರುಗಳಿಗೂ ವಿಶೇಷ ಸ್ಥಾನವಿತ್ತು. ಎತ್ತು ಕೃಷಿ ಕಾರ್ಯಕ್ಕೆ ಆಸರೆಯಾಗಿದ್ದರೆ, ಹಸು ಹಾಲಿನ ಮೂಲಕ ಕುಟುಂಬದ ಅಗತ್ಯ ಪೂರೈಸುತ್ತಿತ್ತು. 'ಗೊಡ್ಡುಗೂಳೆಲ್ಲ ಹೈನಾದೇ' ಎಂಬ ಜನಪದ ಸಾಲು ಕೂಡ ಗ್ರಾಮೀಣ ಆರ್ಥಿಕ ಬದುಕಿನ ಸಮೃದ್ಧಿಯ ಆಶಯವನ್ನು ಪ್ರತಿಬಿಂಬಿಸುತ್ತದೆ.

"ಅಡ್ಡಡ್ಡ ಮಳೆ ಬಂದಾ...
ದೊಡ್ಡದೊಡ್ಡ ಕೆರೆ ತುಂಬಿ...
ಗೊಡ್ಡುಗೂಳೆಲ್ಲ ಹೈನಾದೇ ಜೋಕುಮಾರ...

> **ಜೋಕುಮಾರನ ಆಚರಣೆಯ ಹಿಂದಿದೆ ರೈತನ ಸಮೃದ್ಧಿಯ ಹಾರೈಕೆ**
>
> ಮಳೆ ಬರಲಿ, ಕೆರೆ-ಕಟ್ಟೆಗಳು ತುಂಬಲಿ, ಹೊಲಗಳು ಹಸಿರಾಗಲಿ, ಬಿತ್ತಿದ ಬೀಜ ಸಮೃದ್ಧವಾಗಿ ಬೆಳೆಯಲಿ ಎಂಬುದು ಜೋಕುಮಾರನ ಆಚರಣೆಯ ಹಿಂದಿರುವ ಗ್ರಾಮೀಣ ಆಶಯ. ಜಾನುವಾರುಗಳಿಗೆ ನೀರು-ಮೇವು ದೊರೆಯಲಿ, ರೈತನ ಬದುಕಿನಲ್ಲಿ ನೆಮ್ಮದಿ ನೆಲೆಸಲಿ ಎಂಬ ಹಾರೈಕೆಯೂ ಜನಪದ ಗೀತೆಗಳಲ್ಲಿ ಅಡಕವಾಗಿದೆ.

ಇದು ಕೇವಲ ಜನಪದ ಹಾಡಲ್ಲ, ಮಳೆಗಾಗಿ ಕಾಯುವ ರೈತನ ಮನಸ್ಸು, ಹಸಿರಿಗಾಗಿ ಹಂಬಲಿಸುವ ಮಣ್ಣಿನ ಬದುಕು ಹಾಗೂ ಸಮೃದ್ಧಿಯ ಕನಸಿನ ಪ್ರತಿಬಿಂಬ.

ಜೋಕುಮಾರನ ಆಚರಣೆಯ ಮತ್ತೊಂದು ವಿಶೇಷತೆ ಮೌಖಿಕವಾಗಿ ತಲೆಮಾರುಗಳಿಂದ ಸಾಗಿಬಂದ ಜನಪದ ಪರಂಪರೆ. ಅಜ್ಜ-ಅಜ್ಜಿಯರಿಂದ ಕೇಳಿದ ಹಾಡುಗಳು, ಆಚರಣೆಗಳು ಮಕ್ಕಳ ಮೂಲಕ ಮುಂದಿನ ಪೀಳಿಗೆಗೂ ತಲುಪುತ್ತಿವೆ. ಆಧುನಿಕ ಜೀವನಶೈಲಿ ಹಾಗೂ ಮೊಬೈಲ್-ಸಾಮಾಜಿಕ ಜಾಲತಾಣಗಳ ಪ್ರಭಾವದ ನಡುವೆಯೂ ಗ್ರಾಮೀಣ ಓಣಿಗಳಲ್ಲಿ ಇಂತಹ ಜನಪದ ಹಾಡುಗಳು ಮತ್ತೆ ಮೊಳಗುತ್ತಿರುವುದು ಮಣ್ಣಿನ ಸಂಸ್ಕೃತಿಯ ಜೀವಂತಿಕೆಗೆ ಸಾಕ್ಷಿಯಾಗಿದೆ.

ಗಣಪತಿ ವಿಸರ್ಜನೆಯ ಭಕ್ತಿಭಾವದ ಬೆನ್ನಲ್ಲೇ ಜೋಕುಮಾರನ ಆಗಮನದ ಮೂಲಕ ಹಳ್ಳಿಗಳಲ್ಲಿ ಮತ್ತೊಂದು ಸಾಂಸ್ಕೃತಿಕ ಅಧ್ಯಾಯ ತೆರೆದುಕೊಳ್ಳುತ್ತಿದೆ. ಮಳೆ ಬರಲಿ, ಬೆಳೆ ಸಮೃದ್ಧಿಯಾಗಲಿ, ಕೆರೆಗಳು ತುಂಬಲಿ, ಜಾನುವಾರುಗಳು ಅಭಿವೃದ್ಧಿಯಾಗಲಿ, ರೈತನ ಬದುಕು ಹಸನಾಗಲಿ ಎಂಬ ಹಾರೈಕೆಯೊಂದಿಗೆ ಗ್ರಾಮೀಣರು ಜೋಕುಮಾರನಿಗೆ ಸ್ವಾಗತ ಕೋರುತ್ತಿದ್ದಾರೆ.

## ವಿಷ್ಣುವರ್ಧನ್ ಹುಟ್ಟುಹಬ್ಬ: ರೋಗಿಗಳಿಗೆ ಹಣ್ಣು, ಜ್ಯೂಸ್ ವಿತರಣೆ

**ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಸಾಹಸಸಿಂಹ ಡಾ. ವಿಷ್ಣುವರ್ಧನ್ ಅವರ 76ನೇ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಒಳ ಮತ್ತು ಹೊರರೋಗಿಗಳಿಗೆ ಅಭಿಮಾನಿಗಳಿಂದ ಹಣ್ಣು, ಬಿಸ್ಕತ್ ಹಾಗೂ ಜ್ಯೂಸ್ ವಿತರಿಸಿ ಅರ್ಥಪೂರ್ಣವಾಗಿ ಆಚರಿಸಲಾಯಿತು.



ಬ್ಯಾನರ್, ಕಟೌಟ್‌ಗಳಿಗೆ ಸೀಮಿತವಾಗದೆ ಸಮಾಜಮುಖಿ ಕಾರ್ಯಗಳ ಮೂಲಕ ನೆಚ್ಚಿನ ನಟನ ಜನ್ಮದಿನ ಆಚರಿಸುವುದು ಅಭಿಮಾನಿಗಳ ವಿಶೇಷತೆಯಾಗಿದೆ ಎಂದು ಉಪನ್ಯಾಸಕ ಹೆಚ್.ಎಂ. ಗುರುಬಸವರಾಜಯ್ಯ ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ವೈದ್ಯಾಧಿಕಾರಿ ಡಾ. ಶಿವಕುಮಾರ್ ಬಿ., ತಾಲೂಕು ಆರೋಗ್ಯಾಧಿಕಾರಿ ಪ್ರವೀಣ್, ವಿಷ್ಣುಸೇನಾ ಅಧ್ಯಕ್ಷ ಹೋಟೆಲ್ ಪರಮೇಶ್, ಪ್ರಧಾನ ಕಾರ್ಯದರ್ಶಿ ಸದಾರ್ ಯಮನೂರಪ್ಪ, ಹೆಚ್.ಎಂ. ನಾಗಭೂಷಣ, ಬಿ. ಶಿವರಾಮರೆಡ್ಡಿ, ಎಸ್.ಎಂ. ವೀರೇಶ್, ಕೊಟ್ರೇಶ್ ಬ್ಯಾಲಾಳು ಸೇರಿದಂತೆ ಅಭಿಮಾನಿಗಳು ಉಪಸ್ಥಿತರಿದ್ದರು.

## ಪ್ರಧಾನಿ ಮೋದಿ ಜನ್ಮದಿನ ಆಚರಣೆ



**ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ ಹಗರಿಬೊಮ್ಮನಹಳ್ಳಿ ಬಿಜೆಪಿ ನಗರ ಘಟಕದಿಂದ ಶಿಕ್ಷಕರ ಕಾಲೋನಿಯ ಶ್ರೀ ವಿನಾಯಕ ದೇವಸ್ಥಾನದಲ್ಲಿ 'ಆಶೀರ್ವಾದ ದೀಪ' ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಮೋದಿ ಅವರ ಸಾರ್ವಜನಿಕ ಸೇವಾ ಪಯಣವನ್ನು ಸ್ಮರಿಸಿ ಆರೋಗ್ಯ ತಪಾಸಣೆ, ಸ್ವಚ್ಛತಾ ಅಭಿಯಾನ, ಗಿಡ ನೆಡುವುದು, ರಕ್ತದಾನ ಹಾಗೂ ಜನಜಾಗೃತಿ ಸೇರಿದಂತೆ ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಂಕಲ್ಪ ಮಾಡಲಾಗಿದೆ ಎಂದು ನಗರ ಘಟಕದ ಅಧ್ಯಕ್ಷ ಮಂಜುನಾಥ ಹಿರೇಮಠ ತಿಳಿಸಿದರು.

ಕಾರ್ಯಕ್ರಮದಲ್ಲಿ ಮಂಡಲ ಅಧ್ಯಕ್ಷ ಬೆಣಕಲ್ ಪ್ರಕಾಶ್, ಜಿಲ್ಲಾ ಉಪಾಧ್ಯಕ್ಷ ಬಲಹುಣಿಸಿ ರಾಮಣ್ಣ, ಆರ್‌ಎಸ್‌ಎಸ್ ಮುಖಂಡ ರೊಟ್ಟಿ ಕೊಟ್ರಪ್ಪ, ಮಂಜುನಾಥ ಹಿರೇಮಠ, ಭದ್ರವಾಡಿ ಚಂದ್ರಣ್ಣ ಸೇರಿದಂತೆ ಬಿಜೆಪಿ ಮುಖಂಡರು, ಪುರಸಭೆ ಸದಸ್ಯರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಮಕ್ಕಳಲ್ಲಿ ಸಂಸ್ಕಾರವೇ ಮೊದಲ ಪಾಠ

# ಶಿಕ್ಷಕರೇ ಭವಿಷ್ಯದ ಶಿಲ್ಪಿಗಳು



**ವಿಜಯಸಾಕ್ಷಿ ಸುದ್ದಿ, ಗದಗ**

ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು. ದೇಶದ ಭದ್ರಬುನಾದಿ ಹಾಗೂ ಭವಿಷ್ಯವನ್ನು ರೂಪಿಸುವಲ್ಲಿ ಮಕ್ಕಳ ಪಾತ್ರ ಮಹತ್ವದ್ದಾಗಿದ್ದು, ಅವರಲ್ಲಿ ಸದ್ಗುಣ, ಸಂಸ್ಕಾರ ಹಾಗೂ ಉತ್ತಮ ನಡೆ-ನುಡಿಗಳನ್ನು ಬೆಳೆಸುವಲ್ಲಿ ಶಿಕ್ಷಕರ ಹೊಣೆಗಾರಿಕೆ ಅಪಾರವಾಗಿದೆ ಎಂದು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಹೇಳಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2814ನೇ ಶಿವಾನುಭವದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಹಾಗೂ ಸಾವಿತ್ರಿಬಾಯಿ ಫುಲೆ ಅವರು ನಾಡು ಕಂಡ ಶ್ರೇಷ್ಠ ಶಿಕ್ಷಕರಾಗಿದ್ದಾರೆ. ಮಗುವಿಗೆ ತಾಯಿಯೇ ಮೊದಲ ಗುರು. ಮಕ್ಕಳಲ್ಲಿ ಉತ್ತಮ ಸಂಸ್ಕಾರ ಹಾಗೂ ಆದರ್ಶಗಳನ್ನು ಬೆಳೆಸಬೇಕು. ಇಂದಿನ ಮಕ್ಕಳೇ ದೇಶದ ಮುಂದಿನ ಪ್ರಜೆಗಳಾಗಿದ್ದು, ದೇಶ ಅಭಿವೃದ್ಧಿ ಹೊಂದಬೇಕಾದರೆ ಶಿಕ್ಷಣದ ಗುಣಮಟ್ಟ ಮತ್ತಷ್ಟು ಹೆಚ್ಚಬೇಕು ಎಂದು ಹೇಳಿದರು.

ವಿಧಾನಸಭಾಧ್ಯಕ್ಷರಾಗಿ ಆಯ್ಕೆಯಾದ ಜಿ.ಎಸ್. ಪಾಟೀಲ ಅವರನ್ನು ಶ್ರೀಗಳು ಸನ್ಮಾನಿಸಿ ಶುಭ ಹಾರೈಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಜಿ.ಎಸ್. ಪಾಟೀಲ, ತಮ್ಮ ಜೀವನದ ಬೆಳವಣಿಗೆಯಲ್ಲಿ ತಾಯಿ, ಹಿರಿಯರು ಹಾಗೂ ಮಠಾಧೀಶರ ಆಶೀರ್ವಾದ ಮತ್ತು ಶುಭ ಹಾರೈಕೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು. ತಾಯಿ ಹಾಗೂ ಹಿರಿಯರು ತಮ್ಮನ್ನು ಮತ್ತು ಸಹೋದರರನ್ನು ಪ್ರೀತಿ, ಸಂಸ್ಕಾರದಿಂದ ಬೆಳೆಸಿದ್ದು, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯುತ್ತಿರುವುದಾಗಿ ತಿಳಿಸಿದರು.

ಶಿಕ್ಷಕರ ದಿನಾಚರಣೆ ಅಂಗವಾಗಿ ನಾಡೋಜ ಡಾ. ಚನ್ನವೀರ ಕಣವಿ ಅವರ ತಂದೆ ಲಿಂಗೈಕ್ಯ ಸಕ್ರಪ್ಪ ಕಣವಿ ಹಾಗೂ ಶಿಕ್ಷಣ ತಜ್ಞ ಡಾ. ಬಿ. ಮಲ್ಲಿಕಾರ್ಜುನ ಅವರ ತಂದೆ ಲಿಂಗೈಕ್ಯ ಬಳ್ಳಾರಿ ಚಿತ್ರಕಿ ಕೊಟ್ರಪ್ಪ ಅವರ ಸ್ಮರಣಾರ್ಥ ನೀಡುವ ಆದರ್ಶ ಶಿಕ್ಷಕ ಪ್ರಶಸ್ತಿಯನ್ನು ಆಲಮಟ್ಟಿಯ ಹಳಕಟ್ಟಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕ ಜಿ.ಎಂ. ಕೋಟ್ಯಾಳ ಹಾಗೂ ಬೆಳ್ಳಟ್ಟಿಯ ಎಸ್‌ಜೆಎಫ್ ಪ್ರೌಢಶಾಲೆಯ ಕನ್ನಡ ಶಿಕ್ಷಕಿ ಮಹೇಶ್ವರಿ ಸಿದ್ದರಾಮಪ್ಪ ಸವಡಿ ಅವರಿಗೆ ಪರಮಪೂಜ್ಯರು ಪ್ರದಾನ ಮಾಡಿದರು.

ಶ್ರಾವಣ ಮಾಸದ ಅಂಗವಾಗಿ ಗಿರಿಜಕ್ಕ ಧರ್ಮರಡ್ಡಿ ಅವರು 'ಶರಣರು ಕಂಡ ಅನಾದಿ ಬಸವಣ್ಣ' ವಿಷಯ ಕುರಿತು ನೀಡಿದ ಪ್ರವಚನದ ಮಂಗಲೋತ್ಸವವೂ ನಡೆಯಿತು. ಡಿ.ಸಿ. ಪಾವಟೆ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿನಿ ಕಾವೇರಿ ಬಡಿಗೇರ ಅವರನ್ನು ಸನ್ಮಾನಿಸಲಾಯಿತು.

ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್. ಪಾಟೀಲ ಮುಖ್ಯ ಅತಿಥಿಯಾಗಿ ಮಾತನಾಡಿ, ಜಿ.ಎಸ್. ಪಾಟೀಲ ಅವರು ವಿಧಾನಸಭಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಸಂತಸ ತಂದಿದೆ. ಅವರ ಅವಧಿಯಲ್ಲಿ ವಿಧಾನಸಭೆಯ ಕಾರ್ಯಕಲಾಪಗಳು ಅರ್ಥಪೂರ್ಣವಾಗಿ ನಡೆಯಲಿ ಎಂದು ಶುಭ ಹಾರೈಸಿದರು. ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ದೊಡ್ಡದಾಗಿದೆ. ಯುವಕರು ದುಶ್ಚಟಗಳಿಗೆ ಬಲಿಯಾಗುತ್ತಿರುವ ಹಿನ್ನೆಲೆಯಲ್ಲಿ ಮಕ್ಕಳ ಮೇಲೆ ಪಾಲಕರು ಹೆಚ್ಚಿನ ಗಮನ ಹರಿಸಬೇಕು ಎಂದು ಹೇಳಿದರು. ಶಿವಾನುಭವದ ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವ ಎಸ್.ಎಸ್. ಪಾಟೀಲ ಮಾತನಾಡಿ, ತಾಯಿಯ ಆಶೀರ್ವಾದ ಹಾಗೂ ಬಸವಾದಿ ಶಿವಶರಣರ ಆಶೀರ್ವಾದದಿಂದ ಜಿ.ಎಸ್. ಪಾಟೀಲ ಅವರು ವಿಧಾನಸಭಾಧ್ಯಕ್ಷರ ಸ್ಥಾನಕ್ಕೇರಿದ್ದಾರೆ. ಅವರಿಗೆ ಸದಾ ಆಶೀರ್ವಾದ ಇರಲಿ ಎಂದು ಹಾರೈಸಿದರು.

> ದೇಶದ ಭವಿಷ್ಯವನ್ನು ರೂಪಿಸುವ ಜವಾಬ್ದಾರಿ ಶಿಕ್ಷಕರು ಹಾಗೂ ಪಾಲಕರ ಮೇಲಿದೆ. ಮಕ್ಕಳಲ್ಲಿ ಉತ್ತಮ ಸಂಸ್ಕಾರ, ಆದರ್ಶ ಹಾಗೂ ಸತ್ಪ್ರವೃತ್ತಿಗಳನ್ನು ಬೆಳೆಸಿದಾಗ ಮಾತ್ರ ಅವರು ದೇಶದ ಸತ್ಪ್ರಜೆಗಳಾಗಲು ಸಾಧ್ಯ. ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವುದು ಇಂದಿನ ಅಗತ್ಯವಾಗಿದೆ.
>
> – ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು

ವಚನ ಸಂಗೀತವನ್ನು ಮೃತ್ಯುಂಜಯ ಹಿರೇಮಠ ಹಾಗೂ ಗುರುನಾಥ ಸುತಾರ, ಧರ್ಮಗ್ರಂಥ ಪಠಣವನ್ನು ಸಂಜನಾ ಎಂ. ಹದ್ಲಿ, ವಚನ ಚಿಂತನವನ್ನು ಸನ್ನಿಧಿ ಎಂ. ಹದ್ಲಿ ನೆರವೇರಿಸಿದರು. ವಿವಿಧ ಗಣ್ಯರು ದಾಸೋಹ ಸೇವೆ ಸಲ್ಲಿಸಿದರು.

ಶಿವಾನುಭವ ಸಮಿತಿಯ ಅಧ್ಯಕ್ಷ ಡಾ. ರಮೇಶ ಕಲ್ಲನಗೌಡರ ನಿರೂಪಿಸಿದರು. ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಡಾ. ಉಮೇಶ ಪುರದ ಸ್ವಾಗತಿಸಿದರು. ಉಪಾಧ್ಯಕ್ಷ ಪ್ರಭು ಗಂಜಿಹಾಳ, ಸುರೇಖಾ ಪಿಳ್ಳಿ, ಕಾರ್ಯದರ್ಶಿ ಸಿದ್ಧರಾಮ ಪಟ್ಟೇದ, ಸಹಕಾರ್ಯದರ್ಶಿ ಪ್ರತಿಭಾ ಬಡ್ನಿ, ಕೋಶಾಧ್ಯಕ್ಷ ವೀರಣ್ಣ ಗೋಟಡಕಿ, ಕೆ.ಎಸ್. ಕೋರಿಮಠ, ಸೋಮಶೇಖರ ಪುರಾಣಿಮಠ, ಆದೇಶ ಅಂಗಡಿ ಸೇರಿದಂತೆ ಶ್ರೀಮಠದ ಸದ್ಭಕ್ತರು ಉಪಸ್ಥಿತರಿದ್ದರು.

## ಗಣೇಶನಿಗೆ ವಿಶೇಷ ಪೂಜೆ



**ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಗಾನಯೋಗಿ ಪಂ. ಪಂಚಾಕ್ಷರ ಗವಾಯಿಗಳ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಶ್ರೀ ಗಜಾನನೋತ್ಸವ ಟ್ರಸ್ಟ್ ಕಮಿಟಿ ಪ್ರತಿಷ್ಠಾಪಿಸಿರುವ ಗಣೇಶನಿಗೆ ಐದನೇ ದಿನವಾದ ಶುಕ್ರವಾರ ಎಪಿಎಂಸಿ ದಲಾಲ ಮತ್ತು ಖರೀದಿ ಕಾರಕೂನರ ಸಂಘದ ಆಶ್ರಯದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು.

ಮಂಗಳವಾದ್ಯಗಳೊಂದಿಗೆ ಅಭಿಷೇಕ, ಸಹಸ್ರನಾಮ ಅರ್ಚನೆ ಹಾಗೂ ಮಹಾಮಂಗಳಾರತಿ ನೆರವೇರಿಸಲಾಯಿತು. ವ್ಯಾಪಾರ-ವಹಿವಾಟು ಸುಗಮವಾಗಿ ನಡೆಯಬೇಕು, ಸರ್ವರಿಗೂ ಸಮೃದ್ಧಿ ದೊರೆಯಬೇಕು ಹಾಗೂ ಸಮಾಜದಲ್ಲಿ ಶಾಂತಿ-ಸೌಹಾರ್ದತೆ ನೆಲೆಸಬೇಕು ಎಂದು ಭಕ್ತರು ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಭೀಮಣ್ಣ ಪನ್ನೂರ ಸೇರಿದಂತೆ ಪದಾಧಿಕಾರಿಗಳು ಹಾಗೂ ಶ್ರೀ ಗಜಾನನೋತ್ಸವ ಟ್ರಸ್ಟ್ ಕಮಿಟಿಯ ಪದಾಧಿಕಾರಿಗಳು, ಭಕ್ತರು ಉಪಸ್ಥಿತರಿದ್ದರು.

## ಸಣ್ಣ ಪತ್ರಿಕೆಗಳ ಸಂಘಕ್ಕೆ ದೇವಪ್ಪ ಲಿಂಗದಾಳ ಅಧ್ಯಕ್ಷ



**ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಸಣ್ಣ ಮತ್ತು ಜಿಲ್ಲಾ ಪತ್ರಿಕೆಗಳ ಸಂಘದ ಗದಗ ಜಿಲ್ಲಾ ಘಟಕಕ್ಕೆ ನೂತನ ಅಧ್ಯಕ್ಷರಾಗಿ 'ವೇರಿ ಗುಡ್ ಮಾರ್ನಿಂಗ್' ದಿನಪತ್ರಿಕೆ ಸಂಪಾದಕ ದೇವಪ್ಪ ಎನ್. ಲಿಂಗದಾಳ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ರಾಜ್ಯಾಧ್ಯಕ್ಷ ಶ. ಮಂಜುನಾಥ ಅವರ ನಿರ್ದೇಶನದ ಮೇರೆಗೆ ರಾಜ್ಯ ಕಾರ್ಯದರ್ಶಿ ರಾಜು ಎಂ. ಹೆಬ್ಬಳ್ಳಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪಾದಕರ ಸಭೆಯಲ್ಲಿ ದೇವಪ್ಪ ಲಿಂಗದಾಳ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ನೂತನ ಪದಾಧಿಕಾರಿಗಳನ್ನು ಸನ್ಮಾನಿಸಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ರಾಜು ಎಂ. ಹೆಬ್ಬಳ್ಳಿ, ಕರ್ನಾಟಕ ಸಣ್ಣ ಮತ್ತು ಜಿಲ್ಲಾ ಪತ್ರಿಕೆಗಳ ಸಂಘವು 1980ರಲ್ಲಿ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದಿದೆ. ಇದೀಗ ಪ್ರತಿ ಜಿಲ್ಲೆಯಲ್ಲೂ ಸಂಘದ ಘಟಕಗಳನ್ನು ರಚಿಸಲಾಗುತ್ತಿದೆ ಎಂದು ಹೇಳಿದರು.

ಇಡೀ ದೇಶದಲ್ಲಿಯೇ ಸರ್ಕಾರದಿಂದ ಗೆಜೆಟ್ ಮೂಲಕ ಮಾನ್ಯತೆ ಪಡೆದ ಏಕೈಕ ಸಂಘ ಇದಾಗಿದೆ ಎಂದು ಅವರು ತಿಳಿಸಿದರು. ನೂತನ ಜಿಲ್ಲಾಧ್ಯಕ್ಷ ದೇವಪ್ಪ ಎನ್. ಲಿಂಗದಾಳ ಮಾತನಾಡಿ, ಸರ್ಕಾರ ಹಾಗೂ ವಾರ್ತಾ ಇಲಾಖೆಯಲ್ಲಿ ಮಾನ್ಯತೆ ಹೊಂದಿರುವ ಕರ್ನಾಟಕ ಸಣ್ಣ ಮತ್ತು ಜಿಲ್ಲಾ ಪತ್ರಿಕೆಗಳ ಸಂಘದ ಜಿಲ್ಲಾಧ್ಯಕ್ಷರಾಗಿ ನನ್ನನ್ನು ಆಯ್ಕೆ ಮಾಡಿದ್ದಕ್ಕೆ ಎಲ್ಲ ಸಂಪಾದಕರಿಗೆ ಧನ್ಯವಾದಗಳು. ಸಂಘವು ಯಾವುದೇ ಸಂಘಕ್ಕೆ ಪರ್ಯಾಯವಲ್ಲ. ಪತ್ರಿಕೆಗಳ ಹಿತ ಕಾಪಾಡುವುದು ನಮ್ಮ ಮೂಲ ಉದ್ದೇಶ. ಸಂಘಕ್ಕೆ ಯಾರೇ ಬಂದರೂ ಮುಕ್ತವಾಗಿ ಸ್ವಾಗತಿಸುತ್ತೇವೆ ಎಂದರು.

ಸಭೆಯಲ್ಲಿ ನೂತನ ಖಜಾಂಚಿ ಎನ್. ಆರ್. ಭಾಂಡಗೆ, ಉಪಾಧ್ಯಕ್ಷ ರಮೇಶ ಭಜಂತ್ರಿ, ವಿಭಿನ್ನ ಬರಹ ದಿನಪತ್ರಿಕೆ ಸಂಪಾದಕ ಸಂತೋಷ ಕುರಿ ಸೇರಿದಂತೆ ಹಲವು ಸಂಪಾದಕರು ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka
Printed at : Sai Printing Press, Near Joda Maruti Temple, Gadag-582101, Dist : Gadag- Karnataka